# ಯಕ್ಷಗಾನ
# ಹಸ್ತಾಭಿನಯ ದರ್ಪಣ






ಡಾ. ಜಿ. ಎಸ್. ಹೆಗಡೆ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
೧೪/೩, ನೃಪತುಂಗ ರಸ್ತೆ, ಬೆಂಗಳೂರು-೫೬೦ ೦೦೨

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಕಟಣೆ

ಪ್ರಧಾನ ಸಂಪಾದಕ

ಡಾ. ಜಿ. ಶಂ. ಪರಮಶಿವಯ್ಯ

# ಯಕ್ಷಗಾನ ಹಸ್ತಾಭಿನಯ ದರ್ಪಣ

ಪ್ರಧಾನ ಸಂಪಾದಕ

ಡಾ. ಜೀ. ಶಂ. ಪರಮಶಿವಯ್ಯ

ಸಂಪಾದಕ

ಡಾ|| ಜಿ. ಎಸ್. ಹೆಗಡೆ ಯಡಳ್ಳಿ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

೧೪/೩, ನೃಪತುಂಗ ರಸ್ತೆ, ಬೆಂಗಳೂರು–೫೬೦ ೦೦೨

YAKSHAGANA HASTHABHINAYA DARPANA—A book on Hand-Gasture of Yakshagana by Dr. G. S. Hegde, J. S. S. College, Vidyagiri, Dharwad-4 and Published by Karnataka Jaanapada and Yakshagana Academy, Bangalore-560 002

ಮೊದಲ ಮುದ್ರಣ : ೧೯೯೫

© ಹಕ್ಕುಗಳನ್ನು ಕಾದಿರಿಸಲಾಗಿದೆ

ಬೆಲೆ ರೂ. ೧೫-೦೦

ರೇಖಾ ಚಿತ್ರ : ಶ್ರೀ ಕೇಶವ ಸರಳಾಯ, ಅಡೂರು

ಮುಖಪುಟ ವಿನ್ಯಾಸ : ಡಾ ಜಿ. ಎಸ್. ಹೆಗಡೆ

ಮುದ್ರಕರು : ಜಯಲಕ್ಷ್ಮಿ ಪ್ರಿಂಟರ್ಸ್
೧೪ನೇ ಕ್ರಾಸ್, ರಾಮಾನುಜ ರಸ್ತೆ, ಮೈಸೂರು-೪

# ಅರ್ಪಣೆ

'ಯಕ್ಷಗಾನ ಹಸ್ತಾಭಿನಯ ದರ್ಪಣ' ಎಂಬ ಸಂಶೋಧನೆಯ ಆರಂಭಕ್ಕೆ ಪ್ರೋತ್ಸಾಹಿಸಿ ಅದು ಪ್ರತಿಫಲವನ್ನು ಕೊಡುವ ಮೊದಲೇ ಈ ಲೋಕದಿಂದ ಕಣ್ಮರೆಯಾದ

ಶ್ರೀ ಸೀತಾರಾಮ ಹೆಗಡೆ (ತಂದೆ)
ಶ್ರೀಮತಿ ಗೋದಾವರಿ (ಅಜ್ಜಿ)
ಶ್ರೀ ಮಂಜುನಾಥ ಹೆಗಡೆ (ಭಾವ) ಇವರಿಗೂ
ಹಾಗೂ ಕಲಾವಿದರುಗಳಾದ
ಶ್ರೀ ಶಿರಿಯಾರ ಮಂಜುನಾಯ್ಕ
ಶ್ರೀ ತಿಮ್ಮಣ್ಣ ಗಾಂವಕರ್
ಶ್ರೀ ವರದ ಹಾಸ್ಯಗಾರ
ಶ್ರೀ ಕೃಷ್ಣ ಹೆಗಡ ಮೂರುರು
ಶ್ರೀ ಗಣಪತಿ ಹೆಗಡೆ ಸಾಲಕೋಡು
ಶ್ರೀ ಅಳಿಕೆ ರಾಮಯ್ಯ ರೈ
ಶ್ರೀ ಕೊಂಡದಕುಳಿ ರಾಮ ಹೆಗಡೆ
ಶ್ರೀ ವಿಟ್ಲ ರಾಮಯ್ಯಶೆಟ್ಟಿ
ಶ್ರೀ ಪಿ. ವಿ. ಹಾಸ್ಯಗಾರ
ಶ್ರೀ ಪೆರಡೂರು ರಾಮ ಸೇರಿಗಾರ
ಶ್ರೀ ಮೂರುರು ದೇವರು ಹೆಗಡೆ
ಶ್ರೀ ಕೆರೆಮನೆ ಶಿವರಾಂ ಹೆಗಡೆ
ಶ್ರೀ ತಿಮ್ಮಣ್ಣ ಯಾಜಿ
ಶ್ರೀ ಮಲ್ಲಗದ್ದೆ ಗಣೇಶ ಹೆಗಡೆ
ಭಾಗವತರುಗಳಾದ
ಶ್ರೀ ಉಪ್ಪೂರು ನಾರಾಯಣ ಭಾಗವತ್
ಶ್ರೀ ಕಾಳಿಂಗ ನಾವುಡ
ಶ್ರೀ ಕಡತೋಟ ಕೃಷ್ಣ ಭಾಗವತ
ಇವರ ಪಾದಾರವಿಂದಗಳಿಗೆ ಅರ್ಪಣೆ ಈ ದರ್ಪಣ

# ಪ್ರಧಾನ ಸಂಪಾದಕರ ಮಾತು

ದಕ್ಷಿಣೋತ್ತರ ಕನ್ನಡ ಜಿಲ್ಲೆಗಳಲ್ಲಿ 'ಯಕ್ಷಗಾನವು' ಜನಜನಿತವಾದ ಜನಪದ ಕಲೆಯಾಗಿದೆ. ಈ ಕಲೆಯಲ್ಲಿ ತೆಂಕುತಿಟ್ಟು, ಬಡಗುತಿಟ್ಟು, ಮತ್ತು ಉತ್ತರ ಕನ್ನಡ ತಿಟ್ಟುಗಳೆಂದು ಮೂರು ವಿಭಾಗಗಳಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ತೆಂಕು-ಬಡಗುಗಳೆಂದು ವಿಭಾಗವಿದ್ದರೆ ಉ.ಕ. ದಲ್ಲಿ ಉತ್ತರ ಕನ್ನಡ ತಿಟ್ಟು ಪ್ರಚಲಿತವಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಯಕ್ಷಗಾನಕ್ಕೆ ತನ್ನದೇ ಆದ ವಿಶಿಷ್ಟ ಪರಂಪರೆ ಇದೆ. ಈ ಜಿಲ್ಲೆಯ ಯಕ್ಷಗಾನದಲ್ಲಿ ಹಸ್ತಾಭಿನಯವು ಸಮೃದ್ಧವಾಗಿತ್ತು. ಇದು ಇಂದು ಮಾಯವಾಗುತ್ತಿದೆ. ನಾಟ್ಯಶಾಸ್ತ್ರ ತಜ್ಞರೂ ಯಕ್ಷಗಾನದ ಕುರಿತು ಸಮಗ್ರವಾಗಿ ಅಧ್ಯಯನ ನಡೆಸಿ, ಪಿ ಎಚ್‌ಡಿ. ಪಡೆದ ಡಾ॥ ಜಿ. ಎಸ್. ಹೆಗಡೆ ಯಡಹಳ್ಳಿ, ಇವರು ನಶಿಸುತ್ತಿರುವ ಹಸ್ತಾಭಿನಯನ್ನು ಉಳಿಸುವ ಉದ್ದೇಶದಿಂದ "ಯಕ್ಷಗಾನ ಹಸ್ತಾಭಿನಯದರ್ಪಣ"ವನ್ನು ರಚಿಸಿದ್ದಾರೆ.

ಹಿರಿಯ ಕಲಾವಿದರುಗಳ ಭಾವಚಿತ್ರಗಳೊಂದಿಗೇ ಹಸ್ತಾಭಿನಯದ ವಿಧಾನವನ್ನು ವಿವರಿಸಿದ್ದಾರೆ. ಇವರ ಈ ಪ್ರಯತ್ನ ಸ್ತುತ್ಯಾರ್ಹ. ಈ ಕೃತಿಯನ್ನು ರಚಿಸಿ ಕೊಟ್ಟ ಅವರಿಗೂ ಇದಕ್ಕೆ ಬೇಕಾದ ರೇಖಾ ಚಿತ್ರವನ್ನು ಬರೆದುಕೊಟ್ಟ ಶ್ರೀ ಕೇಶವ ಸರಳಾಯ ಇವರಿಗೂ ಅಕಾಡೆಮಿಯ ಕೃತಜ್ಞತೆಗಳು.

ಈ ಗ್ರಂಥವನ್ನು ಅಂದವಾಗಿ ಮುದ್ರಿಸಿಕೊಟ್ಟ ಜಯಲಕ್ಷ್ಮಿ ಪ್ರಿಂಟರ್ಸ್ ಮಾಲೀಕರಾದ ಶ್ರೀ ಜಯಣ್ಣನವರಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಜೀ. ಶಂ. ಪರಮಶಿವಯ್ಯ

# ನುಡಿಸೇಸೆ-೧

ಯಕ್ಷಗಾನದ ವೇಷಭೂಷಣಗಳ ಗಾತ್ರ ಬಣ್ಣ ಬೇಗಡೆಗಳಿಗೆ ಹೊಂದಿ ಅಭಿನಯವು ಸ್ಥೂಲಮಾನದಲ್ಲಿದೆ. ಅತಿ ಸೂಕ್ಷ್ಮ ಕರಣಗಳಿಗೆ ಬಯಲಾಡಂಬರದಲ್ಲಿ ಅವಕಾಶವೂ ಇಲ್ಲ. ಪ್ರೇಕ್ಷಕರಿಗೆ ಕಾಣಸಿಗುವಂತೆ ಹಸ್ತಾಭಿನಯ ಬಳಸುತ್ತ ಬಂದಿದ್ದಾರೆ. ಕಥಕ್ಕಳಿಯಲ್ಲಿಯೂ ವೇಷದ ಆಡಂಬರವಿದೆಯಾದರೂ ಪದ್ಯಾರ್ಥಗಳನ್ನು ಮುದ್ರೆಯಲ್ಲಿಯೇ ತಿಳಿಸುವ ವಿಧಾನ ರೂಢಿಗೊಂಡಿದ್ದರಿಂದ ಅಲ್ಲಿ ಮುದ್ರೆಗಳ ಬಳಕೆಯಿದೆ. ಇಲ್ಲಿ ವಾಚಿಕಾಭಿನಯವೂ ಇದೆ. ಹಾಗಾಗಿ ಹಸ್ತಾಭಿನಯದಲ್ಲಿ ಕೇದಿಗೆ ಮುಂದಲೆ ಸ್ತ್ರೀವೇಷ ಕಿರೀಟ ಪಾತ್ರಗಳಿಗೆ ಆದ್ಯತೆ. ದೊಡ್ಡಮುಂಡಾಸು ಕೋರೆ ಮುಂಡಾಸು ಘೋರ ರಕ್ಕಸ ಪಾತ್ರಗಳಲ್ಲಿ ಅವಕಾಶ ಕಡಿಮೆಯಾಗುತ್ತದೆ. ಇತ್ತೀಚೆಗೆ ಕಂಡು ಬರುವ ಹಸ್ತಾಭಿನಯದ ಕೊರತೆಗೆ ಕಾರಣ ಅನಧ್ಯಯನ ಅಲಕ್ಷ್ಯಗಳು ಕಲಾವಿದರ ದೋಷಗಳ ಪಟ್ಟಿಗೆ ಆಧುನಿಕ ನಾಗರೀಕತೆಯ ಕರಣಗಳನ್ನು ಬರೆಹಕ್ಕೆ ಸೀಮಿತಗೊಳಿಸುತ್ತ ಬಂದ ಬಗೆಯೂ ಸೇರುತ್ತದೆ. ಯಕ್ಷಗಾನ ಕಲಾರಂಗಕ್ಕೆ ಸಂಬಂಧಿಸಿದ ಅಭಿನಯ ಯಥೋಚಿತ ಔಚಿತ್ಯ ಮೀಮಾಂಸೆಗೆ ಸಂಬಂಧಪಡಬೇಕು. ಯಥಾಶಕ್ತಿ ಯದ್ವಾತದ್ವ ಎಂಬುದಕ್ಕೆ ಇಲ್ಲಿ ಇಂಬು ಸಿಗುತ್ತಿರುವುದು ಶೋಚನೀಯ ಸಂಗತಿ.

ಯಕ್ಷಗಾನದಲ್ಲಿ ಏನಿದೆ ಎಂದು ಕೇಳಿದರೆ ಏನಿಲ್ಲ ಎಂಬ ಮರುಪ್ರಶ್ನೆಯೇ ಮರುತ್ತರವಾಗುತ್ತದೆ. ಈ ದಿಸೆಯಲ್ಲಿ ಈ ಲೇಖಕರ ಪ್ರಯತ್ನ ಸಾಮಾಜಿಕರ ಗಮನ ಸೆಳೆಯುತ್ತದೆ. ಸಂಪನ್ನ ಸಶಕ್ತ ಕಲೆಯೊಂದರ ಸಂಗ್ರಹಗುಣ ನಾಟ್ಯಶಾಸ್ತ್ರ ಸಂಕಲನ ಶೀಲವನ್ನೂ ಪ್ರತಿನಿಧಿಸುತ್ತದೆ. ಮುದ್ರಾ ವಿವರಕ್ಕೆ ತೊಡಗದೆ ಪಾತ್ರಾಭಿನಯ ಸಮ್ಮೇಳಕ್ಕೆ ಸಹಜತೆಯನ್ನು ನೀಡುವ ಹಸ್ತಾಭಿನಯ ತನ್ಮಯೀ ಭಾವಕ್ಕೂ ತನ್ಮೂಲಕ ರಂಗಕ್ಕೂ ಆಕರ್ಷಕ. ಅಭಿನಯ ಭಾಗದಲ್ಲಿ ಆಲೋಚಿಸುವವರಿಗೂ ಅಧ್ಯಯನ ನಡೆಸಬೇಕೆನ್ನುವರಿಗೂ ಈ ಸಂಕಲನ ಕೈಪಿಡಿಯಾಗುತ್ತದೆ. ಕೇವಲ ಪ್ರಚಾರದ ಗೀಳಿಗಷ್ಟೇ ಆದ್ಯತೆ ಕೊಡದೆ ಪ್ರಾಮಾಣಿಕ ಪ್ರಯತ್ನದ ಹಿನ್ನೆಲೆಯಿಂದ ಈ ಕೃತಿಯನ್ನು ರೂಪಿಸಿದ ಜಿ. ಎಸ್. ಹೆಗಡೆಯವರ ಸಾಧನೆ ಈ ರಂಗದಲ್ಲಿ ಇನ್ನೂ ಮುಂದುವರಿಯಲಿ.

—ಶ್ರೀ ಹೊಸ್ತೋಟ ಮಂಜುನಾಥ ಭಾಗವತ್

# ನುಡಿಸೇಸೆ-೨

ಯಕ್ಷಗಾನದಲ್ಲಿ ಹಸ್ತಾಭಿನಯದ ಬಗೆಗಿನ ಈ ಗ್ರಂಥವು ಸುದೀರ್ಘ ಪರಿಶ್ರಮದಿಂದ ನಿರ್ಮಾಣಗೊಂಡ ಒಂದು ಉತ್ಕೃಷ್ಟ ಆಕರ ಗ್ರಂಥವಾಗಿದೆ. ಯಕ್ಷಗಾನ ಕಲಾ ಮಾಧ್ಯಮದಲ್ಲಿ ನಿಖರವಾಗಿ, ಇದೇ ರೀತಿಯಲ್ಲಿರಬೇಕೆಂದು ಹೇಳುವವರು ಕಡಿಮೆ. ಆಧಾರ ಗ್ರಂಥಗಳೂ ಇಲ್ಲ. ಆದ್ದರಿಂದ ಯಾವುದು ಹೇಗೆ ಬಳಸಬೇಕು, ಹಾಗೆ ಉಪಯೋಗವಾದಾಗ ಆಗುವ ಪರಿಣಾಮವೇನು ? ಇದನ್ನೆಲ್ಲ ಲಕ್ಷಿಸಿ ಈ ಗ್ರಂಥ ಸಿದ್ಧವಾಗಿದೆ. ಇದರಲ್ಲಿರುವ ರೇಖಾಚಿತ್ರಗಳು, ಹಸ್ತಾಭಿನಯದ ಚಿತ್ರಗಳು, ಅಭ್ಯಾಸಿಗಳಿಗೆ, ಅಧ್ಯಾಪಕರಿಗೆ ಮಾರ್ಗದರ್ಶಕ. ಇದು ಬರಿಯ ಹೇಳಿಕೆ, ಕೇಳಿಕೆಗಳನ್ನು ಆಧರಿಸಿದ ಹಿರಿಯ ಕಲಾವಿದರಿಂದ ಕಷ್ಟಪಟ್ಟು ಸಂಗ್ರಹಿಸಿದ್ದಾಗಿದೆ. ಸಂಸ್ಕೃತದ ಆಕರ ಗ್ರಂಥಗಳ, ವಿಸ್ತೃತ ಅಧ್ಯಯನ ಮತ್ತು ಯಕ್ಷಗಾನ ಕ್ಷೇತ್ರದಲ್ಲಿನ ವಿಸ್ತಾರವಾದ ಅಭ್ಯಾಸಗಳ ಸಮನ್ವಯದಿಂದ ರೂಪುಗೊಂಡ ಈ ಗ್ರಂಥವು ಯಕ್ಷಗಾನ ವಿಮರ್ಶಾ ಸಾಹಿತ್ಯದಲ್ಲೂ ಒಂದು ಗಣ್ಯ ಕೃತಿಯಾಗಿದೆ. ಇಲ್ಲಿನ ಅಧ್ಯಯನ, ಪರಿಶ್ರಮಗಳಿಗಾಗಿ ಲೇಖಕರಾದ ಶ್ರೀ ಜಿ. ಎಸ್. ಹೆಗಡೆ ಅವರು ಅಭಿನಂದನೀಯರು.

ಯಕ್ಷಗಾನ ರಂಗಸ್ಥಳದಲ್ಲಿ ಹಸ್ತಾಭಿನಯವೆಂಬುದು ಇರಬೇಕೆ ? ಮತ್ತು ಅದು ಇರುವುದಾದರೆ ಹೇಗೆ ಇರಬೇಕು, ಎಂಬ ಬಗ್ಗೆ ಹಲವು ರೀತಿಯ ಅಭಿಪ್ರಾಯಗಳು ಅಲ್ಲಲ್ಲಿ ವ್ಯಕ್ತವಾಗಿವೆ. ಆಂಗಿಕ ಅಭಿನಯವೆಂಬುದು ಎಲ್ಲ ರಂಗ ಕಲೆಗಳ ಮುಖ್ಯ ಅಂಗ. ಅದರ ರೂಪವು ಬೇರೆ ಬೇರೆ ರಂಗಗಳಲ್ಲಿ ವಿಭಿನ್ನವಾಗಿರುತ್ತವೆ. ಹಾಗಾಗಿ ಯಕ್ಷಗಾನ ರಂಗದಲ್ಲಿ ಹಸ್ತಾಭಿನಯವೂ ಮೊದಲಿನಿಂದಲೂ ಇದೆ. ಕೆಲವೊಂದು ಪ್ರದೇಶದಲ್ಲಿ ಅದು ಹೆಚ್ಚು ನಾಜೂಕಾಗಿ, ವಿಸ್ತಾರವಾಗಿ ಬೆಳೆದಿರುವುದನ್ನು ಕಾಣುತ್ತೇವೆ.

ಹಸ್ತಾಭಿನಯವು ಮಿತವಾಗಿದ್ದಲ್ಲಿ ಅದನ್ನು ವಿಸ್ತರಿಸಿ ಕೆಲವು ಕಲಾವಿದರು ಯಶಸ್ವಿಗಳಾಗಿದ್ದಾರೆ. ದಿ॥ ಕುರಿಯ ವಿಠ್ಠಲ ಶಾಸ್ತ್ರಿಗಳು, ದಿ॥ ಮಾಡಂಗಾಯಿ ಕೃಷ್ಣ ಭಟ್ಟರು ಉತ್ತರ ಕನ್ನಡದ ಯಕ್ಷಗಾನದಲ್ಲಿ ವಿಸ್ತಾರವಾದ ಹಸ್ತಾಭಿನಯ ಪರಂಪರೆಯೇ ಬೆಳೆದು ಬಂದಿದೆ. ಯಕ್ಷಗಾನದ ಕುಣಿತ, ಹಿಮ್ಮೇಳ ಮತ್ತು ವೇಷ ವಿಧಾನಕ್ಕೆ ಹೊಂದಿಕೆಯಾಗುವಂತೆ ಹಸ್ತಾಭಿನಯ, ಆಂಗಿಕಾಭಿನಯಗಳನು ಇನ್ನಷ್ಟು ಬೆಳೆಸಬಹುದು. ಬೆಳೆಸಬೇಕು. ಅಂತಹ ಸತ್ಕಾರ್ಯಕ್ಕೆ ಈ ಗ್ರಂಥವು ಪ್ರೇರಣೆ ನೀಡಲೆಂದು ಹಾರೈಸುತ್ತೇನೆ.

ಸುಳ್ಯ — ಕೆ. ಗೋವಿಂದ ಭಟ್ಟ

12-01-1992

# ವಿಷಯ ಪ್ರವೇಶ

ಭಾರತದ ಪ್ರಾದೇಶಿಕ ರಂಗಕಲೆಗಳಾದ ಕೂಡಿಯಾಟ್ಟಂ, ಕಥಕಳಿ, ಆಂಧ್ರ ಪ್ರದೇಶದ ಭಾಗವತ ಮೇಳ, ತಮಿಳುನಾಡಿನ ವೀಥಿನಾಟಕ, ಒರಿಸ್ಸಾದ ಓಡೆಸ್ಸಿ ಬಂಗಾಲದ ಜಾತ್ರಾ, ಅಸ್ಸಾಮದ ಅಂಕಿಯನಾಟ, ಮಹಾರಾಷ್ಟ್ರದ ಲಲಿತ, ಗುಜರಾತದ ಭವಾಯಿ ಮುಂತಾದವುಗಳು ನಾಟ್ಯ ಶಾಸ್ತ್ರ ಗ್ರಂಥಗಳನ್ನು ಪ್ರತಿನಿಧಿಸುವ ರಂಗಕಲೆಗಳಾಗಿದ್ದಂತೆ, ಯಕ್ಷಗಾನವು ನಾಟ್ಯ ಶಾಸ್ತ್ರ ಗ್ರಂಥಗಳ ತಂತ್ರಗಳನ್ನು ಪ್ರತಿನಿಧಿಸುವ ಕರ್ನಾಟಕದ ರಂಗಕಲೆಯಾಗಿದೆ.

ಜನಪದರ ಶಾಸ್ತ್ರೀಯ ಕಲೆಯಾದ ಯಕ್ಷಗಾನ ಸಾಹಿತ್ಯವು ಸಂಸ್ಕೃತದ ವೃತ್ತ, ಚೂರ್ಣಿಕೆ, ದಂಡಕ ಹಾಗೂ ಶಬ್ದ ಸಂಪತ್ತುಗಳಿಂದ ತುಂಬಿದ್ದು ಅಲ್ಲಲ್ಲಿ ಸಂಸ್ಕೃತ ಸಾಹಿತ್ಯದ ಅನುಕರಣೆ ಶ್ಲೋಕಗಳ ಕನ್ನಡ ಅನುವಾದಗಳೂ ಕಂಡುಬರುತ್ತವೆ.

ರಂಗ ಪ್ರದರ್ಶನದಲ್ಲಿ ನಾಟ್ಯಗ್ರಂಥಗಳ ರಂಗತಂತ್ರಗಳೇ ಈ ರಂಗ ಮಾಧ್ಯಮದ ರಂಗ ತಂತ್ರಗಳಾಗಿವೆ. ನಾಟ್ಯ ಗ್ರಂಥಗಳು ಹೇಳಿದ ರಂಗ ತಂತ್ರಗಳು ಮತ್ತು ಯಕ್ಷಗಾನದ ರಂಗತಂತ್ರಗಳನು ಈ ಕೆಳಗಿನಂತೆ ತೌಲನಿಕವಾಗಿ ಹೇಳಬಹುದು.

| ಯಕ್ಷಗಾನ | ನಾಟ್ಯಗ್ರಂಥೋಕ್ತ |
|---|---|
| ಕೇಳಿ ಬಡಿಯುವುದು | ಆಶ್ರವಣ |
| ಸಭಾ ಲಕ್ಷಣ | ಪೂರ್ವರಂಗ |
| ಚೌಕಿಯಲ್ಲಿಯ ಗಣಪತಿ ಪೂಜೆ | ಆಸಾರಿತ |
| ಭಾಗವತ ಮತ್ತು ಹನುಮನಾಯಕನ ಸಂಭಾಷಣೆ | ತ್ರಿಗತ |
| ಬಾಲಗೋಪಾಲರ ನೃತ್ಯ | ಬಾಲಕ್ರೀಡಾವಿಧಿ |
| ಗಣಪತಿ ಕೌತುಕ | ಕೌತ್ವಂ |
| ಪ್ರವೇಶಕ್ಕೆ ಮೊದಲು ಹೇಳುವ ಶ್ಲೋಕ । ಪದ | ಪ್ರಾವೇಶಿಕಿ ದರು |
| ತಿರುಗಿ ಹೋಗುವಾಗ ಹೇಳುವ ಶ್ಲೋಕ : ಪದ | ನಿಷ್ಕ್ರಾಮಕೀ ದರು |
| ಹಾರಿ ಜಿಗಿಯುವಿಕೆ (ಗಿರ್ಕಿ) | ಉತ್ಪ್ಲುತ ಭ್ರಮರಿ |
| ಮೊಣಕಾಲು ಕುಣಿತ (ಮಂಡಿ) | ಜಾನು ಭ್ರಮರಿ |
| ಒಂಟಿಕಾಲಿನಲ್ಲಿ ನಿಲ್ಲುವುದು ಮುಂತಾದವು | ಏಕಪಾದ ಸ್ಥಾನಕ |

ಮುಂತಾದವುಗಳು ವಿವಿಧ ನಾಟ್ಯ ಗ್ರಂಥಗಳಲ್ಲಿ ಹೇಳಿದವುಗಳೇ ಆಗಿರುವವು. ಪಾತ್ರ ಪ್ರವೇಶಕ್ಕೆ ಮೊದಲುಹಿಡಿಯುವ ತೆರೆಯ ಕುರಿತು 'ನಾಟ್ಯ ಸರ್ವಸ್ವ ದೀಪಿಕಾ', 'ವಿಷ್ಣು ಧರ್ಮೋತ್ತರ', 'ಅನರ್ಘ ರಾಘವ' ಗ್ರಂಥಗಳು ಸೂಚಿಸಿರುತ್ತವೆ.

ವೇಷಗಳು ಸಂಭಾಷಿಸುವ ಸಂಭಾಷಣೆಯೂ ಸಹ ನಾಟ್ಯಧರ್ಮಿಯಿಂಲೇ ಕೂಡಿದ್ದು ವೇಷವನ್ನು ವಹಿಸುವ ವೇಷಧಾರಿಗಳು ಜಾನಪದರಾದ್ದುದರಿಂದ ಇದನ್ನು ವಿಮರ್ಶಕರು ಜಾನಪದದ ಸಾಲಿಗೆ ಸೇರಿಸಿದ್ದಾರೆನ್ನಬಹುದು. ನಾಟ್ಯ ಗ್ರಂಥಗಳು ಮತ್ತು ಶಾಸ್ತ್ರೀಯ ರಂಗಕಲೆಗಳೊಂದಿಗೆ ಇದನ್ನು ತೌಲನಿಕವಾಗಿ ವೀಕ್ಷಿಸಿದಾಗ ಮಾತ್ರ ಈ ಕಲೆಯ ಶಾಸ್ತ್ರೀಯತೆಯ ಅರಿವು ಉಂಟಾಗುವುದು. ಈ ರೀತಿಯ ಅಧ್ಯಯನವು ಈ ಹಿಂದೆ ವ್ಯಾಪಕವಾಗಿ ನಡೆಯದೇ ಇತ್ತಿತ್ತಲಾಗಿ ಆ ಮಾರ್ಗ ಆರಂಭವಾಗಿದೆ.

ಯಕ್ಷಗಾನದಲ್ಲಿ ಕಳೆದು ಹೋದ ಎಷ್ಟೋ ಅಂಶಗಳಲ್ಲಿ 'ಹಸ್ತಾಭಿನಯವು' ಒಂದಾಗಿದ್ದು ಅವನ್ನು ಉಳಿಸುವ ದೃಷ್ಟಿಯಿಂದ ದಕ್ಷಿಣೋತ್ತರ ಕನ್ನಡ ಜಿಲ್ಲೆ ಚಿಕ್ಕಮಂಗಳೂರು ಜಿಲ್ಲೆ ಶಿವಮೊಗ್ಗ ಜಿಲ್ಲೆಗಳ ವೃತ್ತಿ ನಿವೃತ್ತ, ವೃತ್ತಿ ಪ್ರವೃತ್ತರ (ಸುಮಾರು 25 ರಿಂದ 90 ವರ್ಷಗಳ ವೇಷಧಾರಿಗಳು) ಹತ್ತಿರ ಹೋಗಿ ಈ ಕುರಿತು ಅಭಿನಯದ ಭಾವಚಿತ್ರ ಮಾಹಿತಿಗಳನ್ನು ಸಂಗ್ರಹಿಸಿದ್ದೆನು (1982 ರಿಂದ). ಅದನ್ನು ತಿಳಿದ ಶ್ರೀಯುತ ಮಹಾಬಲ ಹೆಗಡೆ ಕೆರೆಮನೆ ಇವರು ಇದನ್ನು ಒಂದು ಪುಸ್ತಕದ ರೂಪದಲ್ಲಿ ತಂದರೆ ಮಹೌಲ್ಯಭರಿತವಾದ ವಸ್ತುವೊಂದರ ಅಧ್ಯಯನವಾದಂತಾಗುತ್ತದೆ ಎಂದು ಆಗಾಗ ಹೇಳುತ್ತಿದ್ದರು. ಅಲ್ಲದೆ ಆಗಾಗ ನನ್ನ ಅನೇಕ ಕಲಾವಿದ ಮಿತ್ರರೂ ಸಹ ಈ ಭಾವಚಿತ್ರಗಳನ್ನು ನೋಡಿ ಇದನ್ನು ಪ್ರಕಟಿಸುವುದಕ್ಕೆ ಪ್ರೋತ್ಸಾಹಿಸುತ್ತಿದ್ದರು. ಇವರೆಲ್ಲರ ಪ್ರೋತ್ಸಾಹ ಸಹಕಾರದ ಪ್ರತೀಕವೇ 'ಯಕ್ಷಗಾನ ಹಸ್ತಾಭಿನಯ ದರ್ಪಣ.'

ಈ ಪುಸ್ತಕವು ಯಕ್ಷಗಾನವನ್ನು ವಿಮರ್ಶಿಸುವ ವಿಮರ್ಶಾಗ್ರಂಥವಲ್ಲ. ಆದರ ಬದಲಾಗಿ ಯಕ್ಷಗಾನ ಹಸ್ತಾಭಿನಯವನ್ನು ಪ್ರದರ್ಶಿಸುವ ಒಂದು ಲಕ್ಷಣ ಗ್ರಂಥ. ಆದಕಾರಣ ಇದಕ್ಕೆ 'ಅಭಿನಯ ದರ್ಪಣ' ಎಂದು ಹೆಸರಿಸಿ ಕರ್ನಾಟಕದ ಲಲಿತಕಲಾ ಪ್ರಪಂಚಕ್ಕೆ ಅರ್ಪಿಸುತ್ತಿದ್ದೇನೆ. ಈ ಅರ್ಪಣೆಯ ಹಿನ್ನೆಲೆಯಲ್ಲಿ ಅನೇಕ ಕೈಗಳು ಹೃದಯಗಳು ಸಹಕರಿಸಿವೆ. ನನಗೆ ಭಾವ ಚಿತ್ರಗಳನ್ನು ಹಾಗೂ ಮಾಹಿತಿಯನ್ನು ಒದಗಿಸಿದ ಕಲಾವಿದರುಗಳಿಗೂ, ಎಲ್ಲರ ಮನಸ್ಸೂ ಮುದಗೊಳ್ಳುವಂತೆ ಲಕ್ಷಣವಾಗಿ ರೇಖಾಚಿತ್ರವನ್ನು ಬರೆದುಕೊಟ್ಟ ಶ್ರೀ ಕೇಶವ ಸರಳಾಯರಿಗೂ, ಸೂಕ್ತ ಸಲಹೆಗಳಿತ್ತ ಡಾ.ದಯಾನಂದ ಶ್ಯಾನಭಾಗ, ಡಾ.ಶಿವರಾಮ ಕಾರಂತ, ಪಿ.ಎಂ.ಹೆಗಡೆ, ಡಿ.ಪಿ.ಹೆಗಡೆ, ಡಾ. ಶಾಲಿನಿ ರಘುನಾಥ ಭಟ್, ಎಂ.ರಮೇಶ, ನಳಿನಿ ಹೆಗಡೆ, ಜಿ. ವಿ. ಹೆಗಡೆ ದಂಪತಿ

ಗಳಿಗೂ, ಗೋಪಾಲಕೃಷ್ಣ ನಾಯಕ ಮತ್ತು ಕುಟುಂಬದವರಿಗೂ, ಸುಬ್ರಾಯ ಚೊಕ್ಕಾಡಿ ಹಾಗೂ ಕುಟುಂಬದವರಿಗೂ, ಯು. ಲಕ್ಷ್ಮೀನಾರಾಯಣ ಭಟ್ ಇವರಿಗೂ, ನನ್ನ ಯಕ್ಷಗಾನ ಗುರುಗಳಾದ ಶ್ರೀ ಆರ್. ಎಮ್. ಹೆಗಡೆ ಕೆರೆಮನೆ ಮತ್ತು ಶ್ರೀಮತಿ ನಾಗವೇಣಿ ಹೆಗಡೆ ಕೆರೆಮನೆ ಇವರಿಗೂ, ಪ್ರೋತ್ಸಾಹಿಸಿದ ಡಾ. ಎಂ. ಸುಗುಣ ಗೌಡ, ಗಿರಿಧರ ಹೆಗಡೆ, ಕೇಶವ, ಮಹೇಶ, ಡಾ. ಟಿ. ಕೃಷ್ಣಮೂರ್ತಿ, ಎಸ್. ಟಿ. ಚಿಲುವೆ ಗೌಡ, ಶ್ಯಾಮ ಭಟ್, ವೆಂಕಟ್ರಾಮ ಭಟ್, ರಾಜಾರಾಮ , ಬಾಲ ಜಗನ್ಮೋಹನ್ ರೈ, ಎಚ್. ಎಸ್. ರವೀಂದ್ರ, ವೇಣುಗೋಪಾಲ, ಭಾಸ್ಕರ, ನಾಣು ಆರ್. ಸಿ. ದತ್ತ ಇವರುಗಳಿಗೂ, ದಂಪತಿಗಳಾದ ಡಾ. ಶಿಕಾರಿಪುರ ಕೃಷ್ಣಮೂರ್ತಿ' ಡಾ. ಜಿ.ಎನ್. ಭಟ್ ಇವರುಗಳಿಗೂ, ಪ್ರಕಾಶ ಭಟ್, ಎನ್.ವಿ. ಭಟ್, ಶ್ರೀಕಾಂತ, ಆರ್. ಕೆ. ಹೆಗಡೆ, ಎಂ. ಜಿ. ಹೆಗಡೆ, ಶ್ಯಾಮ ಇವರಿಗೂ ಹಸ್ತಪ್ರತಿಯನ್ನು ಬರೆದು ಕೊಟ್ಟ ಕು. ಮಂಗಲಾ, ಉಷಾ ಇವರಿಗೂ, ಆಶೀರ್ವದಿಸಿ ಪ್ರೋತ್ಸಾಹಿಸಿದ ಕುಟುಂಬದವರಿಗೂ, ಊರಿನ ಹಿರಿಯರಿಗೂ, ಶ್ರೀ ಶ್ರೀ ಶ್ರೀ ವಿದ್ಯಾಭೂಷಣ ತೀರ್ಥ ಸ್ವಾಮಿಜಿ ಸುಬ್ರಹ್ಮಣ್ಯ ಮಠ, ಇವರಿಗೂ, ಹಸ್ತಪ್ರತಿಯನ್ನು ತಿದ್ದಿ ಮಾರ್ಗದರ್ಶನ ನೀಡಿದ ಶ್ರೀ ಎಂ. ರಾಜಗೋಪಾಲಾಚಾರ್ಯ, ಶ್ರೀ ಮಹಾಬಲ ಹೆಗಡೆ ಕೆರೆಮನೆ ಇವರಿಗೂ ಹಸ್ತಪ್ರತಿಯನ್ನು ಓದಿ ತಮ್ಮ ನುಡಿಸೆಸೆಯನ್ನು ಬರೆದ ಶ್ರೀ ಕೆ. ಗೋವಿಂದಭಟ್ಟ ಹಾಗೂ ಹೊಸತೋಟ ಮಂಜುನಾಥ ಭಾಗವತ, ಹಸ್ತಪ್ರತಿಯನ್ನು ತಿದ್ದಿದ ಶ್ರೀ ಶಾರದಾ ಪ್ರಸಾದ್, ಈ ಪುಸ್ತಕವನ್ನು ಹೊರತಂದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರು ಹಾಗೂ ಸದಸ್ಯರಿಗೂ ನನ್ನ ಕೃತಜ್ಞತೆಗಳು.

ಯಡಳ್ಳಿ

ಡಾ|| ಜಿ. ಎಸ್. ಹೆಗಡೆ

# ಪೀಠಿಕೆ

"ಅಭಿನಯವು" ಎಲ್ಲ ರಂಗಗಳಲ್ಲಿ ಅತ್ಯಂತ ಮಹತ್ವದ ಅಂಶವಾಗಿರುವುದು. ಅಭಿನಯ ಎಂದರೆ—

"ಅಭಿಪೂರ್ವಸ್ತು ಣೇಚ್ ಧಾತುರಭಿಮುಖ್ಯಾರ್ಥ ನಿರ್ಣಯೇ
ಯಸ್ಮಾತ್ಪದಾರ್ಥಾನ್ನಯತಿ ತಸ್ಮಾದಭಿನಯಃ ಸ್ಮೃತಃ ||
ವಿಭಾವತಿ ಯಸ್ಮಾಚ್ಚ ನಾನಾರ್ಥಾನ್ ಹಿ ಪ್ರಯೋಗತಃ
ಶಾಖೋಪಾಂಗ ಸಂಯುಕ್ತಸ್ಮಾದಭಿನಯಃ ಸ್ಮೃತಃ|| [1]

ಎಂಬುದಾಗಿ ಭರತನ ಅಭಿಪ್ರಾಯವಾದರೆ, ವಿಶ್ವನಾಥನು "ಭವೇದಭಿನಯೋऽವಸ್ಥಾನುಕಾರಃ" ಎಂದು ಹೇಳಿ ಮುಂದೆ "ನಟೈರಂಗಾದಿಭಿಃ ರಾಮ ಯುಧಿಷ್ಠಿರಾದೀನಾಮವಸ್ಥಾನುಕರಣಮಭಿನಯಃ" ಅಂದರೆ ನಟನು ರಾಮ, ಯುಧಿಷ್ಠಿರ ಮುಂತಾದವರ ಅನುಕರಣೆಯನ್ನು ಮಾಡಿ ತೋರಿಸುವುದು. ಅಥವಾ ತಾನು ವಹಿಸಿದ ರಾಮ ಮುಂತಾದ ಪಾತ್ರಗಳನ್ನು ಪ್ರೇಕ್ಷಕರಿಗೆ ಅರಿವು ಮಾಡಿಕೊಡುವುದು. ಉದಾಹರಣೆಗೆ: ರಾಮಾಯಣದ ಕಥಾಭಾಗವನ್ನು ನಟಿಸುತ್ತಿರುವಾಗ ಪ್ರೇಕ್ಷಕರು, ನಟಿಸುತ್ತಿರುವ ವ್ಯಕ್ತಿಯನ್ನು ನೋಡದೆ ರಾಮನನ್ನು ನೋಡುತ್ತಿದ್ದೇವೆ ಎಂದು ಭಾವಿಸುವಂತೆ ಮಾಡುವುದೇ ಅಭಿನಯ. ಅಥವಾ ಪಾತ್ರಧಾರಿ ಪಾತ್ರವನ್ನು ಪ್ರೇಕ್ಷಕರ ಹೃದಯದಲ್ಲಿ ಚಿತ್ರಿಸುವಿಕೆಯೆ ಅಭಿನಯ. ಒಟ್ಟಿನಲ್ಲಿ "ಅಭಿನಯ" ಎಂದರೆ ಹತ್ತಿರಕ್ಕೆ ಒಯ್ಯುವುದು—ಎಂಬ ವೈಯ್ಯಾಕರಣರ ಅರ್ಥ ಇದೇ ಆಗಿರುವುದು.[3] ಹೀಗೆ ಅಭಿನಯಿಸಿ ತೋರಿಸಲು ನಾಲ್ಕು ವಿಧಗಳು ಆಕರಗಳಾಗಿರುತ್ತವೆ.[4]

1. ಆಂಗಿಕಾಭಿನಯ : ಎಂದರೆ ಭಾವಸೂಚಕವಾದ ಅಂಗಗಳ ಅಭಿನಯ.[5]
2. ವಾಚಿಕಾಭಿನಯ : ಎಂದರೆ ಗೀತೆ, ಸಂಭಾಷಣೆಗಳ ಮೂಲಕ ಅಭಿನಯಿಸುವಿಕೆ.
3. ಆಹಾರ್ಯಾಭಿನಯ : ಎಂದರೆ ವೇಷ ಭೂಷಣ ಇತ್ಯಾದಿ.
4. ಸಾತ್ವಿಕಾಭಿನಯ : ಎಂದರೆ ಮನಸ್ಸಿನಲ್ಲಿ ಹುಟ್ಟುವ ಭಾವನೆಗಳ ಅಭಿನಯ (ರಸ, ಭಾವಗಳ ಅಭಿನಯ)

ಸತ್ವಾತ್ ಸಂಭೂತಾಃ ಸಾತ್ವಿಕಾಃ ಭಾವಾಃ—ಕೈಯಿಂದಲೋ ಮುಖಭಾವದಿಂದಲೋ ಅಲ್ಲದೆ ತನ್ನಿಂದ ತಾನೇ ದೈಹಿಕ ಸತ್ವಗಳಿಂದುಂಟಾಗುವ ಭಾವಗಳು. (ಇದನ್ನು ಸಾಭಿನಯವಾಗಿ ನಿಷ್ಣಾತ ತೋರಿಸಬಹುದು, ಅದು ಅಭ್ಯಾಸ ಸಾಧ್ಯ) ಅವು ಸ್ತಂಭ ಪ್ರಲಯ, ರೋಮಾಂಚ ಇತ್ಯಾದಿ ಭಾವಸೂಚಕವಾದ ಅಂಗಗಳಲ್ಲಿ ಹಸ್ತವೂ ಸಹ ಒಂದಾಗಿದ್ದು ಅದನ್ನು 'ಹಸ್ತಾಭಿನಯ' ಎಂತೇ ಹೆಸರಿಸಿದ್ದಾರೆ.[6] ಹಸ್ತಾಭಿನಯ ಎಂದರೆ ಹಸ್ತಗಳ (ಬೆರಳುಗಳ ವಿವಿಧ ರೀತಿಯ ಸಂಯೋಗದ) ಮೂಲಕ ವಸ್ತು, ಪ್ರಾಣಿ, ಪಕ್ಷಿ ಮುಂತಾದವುಗಳನ್ನು ಅಭಿನಯಿಸಿ ತೋರಿಸುವಿಕೆ. ಸಂಸ್ಕೃತ ನಾಟ್ಯಶಾಸ್ತ್ರ ಗ್ರಂಥ ಕರ್ತರು ಹಸ್ತಗಳನ್ನು

1. ಅಸಂಯುತ (ಒಂದೇ ಹಸ್ತದಿಂದ ಅಭಿನಯಿಸುವುದು)
2. ಸಂಯುತ (ಎರಡು ಹಸ್ತಗಳಿಂದ ಅಭಿನಯಿಸುವುದು)

ಎಂದು ವಿಭಾಗಿಸಿ ಇದನ್ನು ಪುನಃ ನೃತ್ತ ಹಸ್ತ, ನೃತ್ಯಹಸ್ತಗಳೆಂದು ವಿಭಾಗಿಸಿದ್ದಾರೆ[7].

ಈ ಹಸ್ತಗಳನ್ನು—

1. ನಾಟ್ಯಧರ್ಮಿ
2. ಲೋಕಧರ್ಮಿ—

ಎಂದು ವಿಭಾಗಿಸಬಹುದಲ್ಲದೆ

1. ಸಂಜ್ಞಾ
2. ಸಂಕೇತ
3. ಮುದ್ರೆ—ಗಳೆಂದೂ ಸೂಚಿಸಬಹುದಾಗಿದೆ.

ಕಾಲವೊಂದರಲ್ಲಿ ಗಾನ ಶೈಲಿಯಾಗಿದ್ದ[8] ಯಕ್ಷಗಾನವು ಕಾಲಕ್ರಮೇಣ ನಾಟ್ಯ ಗ್ರಂಥಗಳ ರಂಗಪ್ರಯೋಗ ತಂತ್ರಗಳನ್ನು ಅಳವಡಿಸಿಕೊಂಡು[9] ಜಾನಪದೀಯ ಸತ್ವವನ್ನು ಹೊಂದಿ ಜನಪದ ಜನರಿಂದ, ಜನಪದದಲ್ಲಿ, ಜನಪದ ಜನರಿಗಾಗಿ ಬೆಳೆದು ಬಂದ ಜನಪದರ ಶಾಸ್ತ್ರೀಯ ಕಲೆಯಾಗಿದೆ.

ಈ ಕಲೆಯಲ್ಲಿ ಸಾತ್ವಿಕಾಭಿನಯ[10] ಒಂದನ್ನುಳಿದು ಉಳಿದ ಮೂರು ಅಭಿನಯಗಳು ಸಾಕಷ್ಟು ಪುಷ್ಟಿಯಾಗಿ ಅಭಿನಯಿಸಲ್ಪಡುತ್ತವೆ. ಅದರಲ್ಲಿಯೂ ವಿಶೇಷತಃ ಹಸ್ತಾಭಿನಯವು, ಹಿಂದೊಂದು ಕಾಲದಲ್ಲಿ ಪರಿಪೂರ್ಣವಾಗಿದ್ದು ಇಂದು ಮಾಯವಾಗುತ್ತಿದೆ. 'ಯಕ್ಷಗಾನದಲ್ಲಿ ಹಸ್ತಾಭಿನಯವು ಬಾಳೆಯ ಕುಂಡಿಗೆಯಂತೆ ಪ್ರಾರಂಭದಲ್ಲಿ ದಪ್ಪವಾಗಿ ತುದಿಯಲ್ಲಿ ತೆಳುವಾಗಿರುವಂತೆ ಹಿಂದೆ ಸಮೃದ್ಧವಾಗಿದ್ದು ಇಂದು ಕ್ಷೀಣಿಸುತ್ತಿದೆ' ಎಂಬ ಕೆರೆಮನೆ ಮಹಾಬಲ ಹೆಗಡೆಯವರ ನುಡಿ ಸತ್ಯವಾದದ್ದು ಎಂಬುದು ಹಿಂದಿನ ವೇಷಧಾರಿಗಳಿಂದ ಇಂದಿನ ವೇಷಧಾರಿಗಳವರೆಗೆ ಅಭಿನಯವನ್ನು ಅವಲೋಕಿಸಿದಾಗ ಸ್ಪಷ್ಟವಾಗುವುದು.

ಯಕ್ಷಗಾನದಲ್ಲಿಯೂ ಹಸ್ತಾಭಿನಯವು ಸಮೃದ್ಧವಾಗಿದ್ದ ಕಾಲವೊಂದಿತ್ತು ಎಂಬುದು ಅನೇಕ ವಿಮರ್ಶಕರ, ಹಿರಿಯ ಕಲಾವಿದರ ಅಭಿಪ್ರಾಯದಿಂದ ವ್ಯಕ್ತವಾಗುತ್ತದೆ.[11] ಈ ಹಸ್ತಾಭಿನಯದ ಕಲಿಕೆಯು ಪ್ರತ್ಯೇಕವಾಗಿರದೇ ತಾಳ–ಲಯದ ಕಲಿಕೆಯ ನಂತರ ಪ್ರಸಂಗವನ್ನು ರಂಗಕ್ಕೆ ತರುವ ತರಬೇತಿಯಲ್ಲಿ ತಾಳಕ್ಕನುಗುಣವಾಗಿ ಅಭಿನಯಿಸುವಾಗ ಹಸ್ತಾಭಿನಯವನ್ನು ಕಲಿಸುತ್ತಿದ್ದರೆಂದು ತಿಳಿದು ಬರುತ್ತದೆ. “.......ಮೊದಲು ತಾಳಗಳನ್ನು (ಕೈಯಲ್ಲಿ ಲೆಕ್ಕದ ಪೆಟ್ಟುಗಳನ್ನು) ಬಾರಿಸಲು ಕಲಿಸುತ್ತಿದ್ದರು. ಎಲ್ಲಾ ತಾಳದ ಪೆಟ್ಟುಗಳನ್ನೂ ಬಾರಿಸಲು ಕಲಿತ ಮೇಲೆ ಬೇರೆ ಬೇರೆ ತಾಳಗಳ ಪದ್ಯಗಳನ್ನು ಕೈಯಲ್ಲಿ ತಾಳಹಾಕುತ್ತ ಹೇಳಲು ಕಲಿಸುತ್ತಿದ್ದರು. ಆಮೇಲೆ ನಾಟ್ಯ, ನಾಟ್ಯ ಕಲಿಸುವಾಗ ಮೊದಲು ನಿಲ್ಲುವ ಭಂಗಿ ಅಂದರೆ ಎರಡು ಕಾಲುಗಳ ನಡುವೆ ಎಷ್ಟು ಅಂತರವಿರಬೇಕು, ಕೈಗಳು ಹೇಗೆ (ಭುಜಕ್ಕೆ ಸಮಾನಾಂತರವಾಗಿ) ಇರಬೇಕು ಮತ್ತು ಕೈಕಾಲುಗಳು ಯಾವ ಯಾವ ಸಂದುಗಳನ್ನು ಬಿಗಿ ಹಿಡಿದುಕೊಳ್ಳಬೇಕು ಎಂದು ಹೇಳಿಕೊಡುತ್ತಿದ್ದರು. ಕಣ್ಣು ಕೈಗಳ ಸಂಬಂಧ ಹೇಗಿರಬೇಕು ಎಂತ ಅವರು ಸ್ವತಃ ಮಾಡಿ ತೋರಿಸಿ ನನ್ನಿಂದ ಹಾಗೆಯೇ ಮಾಡಿಸುತ್ತಿದ್ದರು. ....ಆಮೇಲೆ ಗೋಪಾಲವೇಷ, ಸ್ತ್ರೀ ವೇಷ, ಪುಂಡುವೇಷ, ನಾಯಕವೇಷ, ಪ್ರತಿನಾಯಕ ವೇಷಗಳ ಪದ್ಯಗಳನ್ನು ಹೇಳುತ್ತ ಮುದ್ರೆಗಳನ್ನು ಮಾಡಿ ತೋರಿಸಿ ನನ್ನಿಂದಲೂ ಪದ್ಯ ಹೇಳಿಸುತ್ತ ಮುದ್ರೆಗಳನ್ನು ಮಾಡಿಸುತ್ತಿದ್ದರು. ಮುದ್ರೆಗಳನ್ನು ಭರತಶಾಸ್ತ್ರ ಗ್ರಂಥಗಳನ್ನು ಓದಿ ಅದರಿಂದ ಆಯ್ದುಕೊಂಡು ಯಕ್ಷಗಾನ ವೇಷಭೂಷಣಗಳಿಗೆ ಹೊಂದಿಕೆಯಾಗುವ ರೀತಿಯಲ್ಲಿ ರೂಪಿಸಿಕೊಂಡಿರಬೇಕು. ಇದರಲ್ಲಿ ಭರತನಾಟ್ಯದಷ್ಟು ಸೂಕ್ಷ್ಮವಾದ ಅಭಿನಯವಿಲ್ಲ. ಇದರಲ್ಲಿ ಮುದ್ರಾಭಿನಯವು ಸ್ಥೂಲವಾಗಿದೆ. ನಮ್ಮ ತಂದೆಯವರು ಮುದ್ರೆಗಳನ್ನು ಕಲಿಸುವಾಗ “ಮುದ್ರೆಯೆಂದರೇ ಬರಿ ಕೈ ತಿರುಗಿಸುವುದಲ್ಲ ಅದಕ್ಕೆ ಶಾಸ್ತ್ರವೇ, ಇದೆ ಎಂತ ಹೇಳಿ, ಅನೇಕ ಶ್ಲೋಕಗಳನ್ನು ಹೇಳುತ್ತಿದ್ದರು. ಮತ್ತು ಅವುಗಳ ಅರ್ಥವನ್ನು ಹೇಳಿ ಕೈಯಿಂದ ಮುದ್ರೆಗಳನ್ನು ಮಾಡಿ ತೋರಿಸುತ್ತಿದ್ದರು.”[12]

ಯಕ್ಷಗಾನದಲ್ಲಿ ಹಸ್ತಾಭಿನಯವು ಎಂದಿನಿಂದ ಬಳಕೆಯಲ್ಲಿತ್ತು ಎಂಬ ವಿಚಾರವು ಯಕ್ಷಗಾನ ಕಲಿಕೆಯು ಎಂದಿನಿಂದ ಆರಂಭವಾಯಿತು ? ಎಂಬ ಪ್ರಶ್ನೆಗೆ ಸರಿಯಾದುದಾಗಿದೆ. ಯಕ್ಷಗಾನದಲ್ಲಿ ಹಸ್ತಾಭಿನಯವು ಯಕ್ಷಗಾನದ ಆರಂಭದಿಂದಲೇ ಆರಂಭವಾಯಿತೆಂಬ ಅಭಿಪ್ರಾಯವನ್ನು ಯಕ್ಷಗಾನ ಕಲಾವಿದರು ಹೊಂದಿದವರಾಗಿದ್ದು ಸುಮಾರು 500 ವರ್ಷಗಳ ಹಿಂದಿನಿಂದಲೇ ಆರಂಭವಾಗಿದೆ ಎನ್ನುತ್ತಾರೆ. ಯಕ್ಷಗಾನ ಕಲೆಯಲ್ಲಿ ನಾಟ್ಯಗ್ರಂಥಗಳ ಎಲ್ಲಾ ತಂತ್ರಗಳೂ ಒಳಗೊಂಡಿರುವ ಕಾರಣ ಆ ತಂತ್ರಗಳಿಂದಲೇ ಯಕ್ಷಗಾನ ರಂಗ ಬೆಳಕಿಗೆ ಬಂದದ್ದರಿಂದ ಅದರೊಂದಿಗೆ ಹಸ್ತಾಭಿನಯವೂ ಸಹ ಬೆಳೆದು ಬಂದಿದೆ. ಆದರೆ ಈ ಕಲೆಯಲ್ಲಿ ಕೆಲವು ಅಂಶ ಜಾನಪದದ ಸತ್ವವೂ ಸಹ ಇದ್ದದ್ದರಿಂದ ಉಳಿದ ಕಲೆಗಳಷ್ಟು ಸಂಕೀರ್ಣವಾದ ನೃತ್ಯ, ಭಾವ, ಭಂಗಿ

ಹಸ್ತಾಭಿನಯಗಳು ಸ್ಫುಟಗೊಳ್ಳಲಿಲ್ಲ. ಕಲೆಯ ಆಯ, ಆಕಾರಕ್ಕನುಗುಣವಾಗಿ ಅವುಗಳನ್ನು ಅಳವಡಿಸಿಕೊಂಡು ಪ್ರದರ್ಶಿಸುತ್ತಾರೆ. ಎಲ್ಲಾ ಅಂಗಗಳಿಂದಲೂ ಸಮೃದ್ಧವಾಗಿದ್ದ ಈ ಕಲೆಯನ್ನು, ಒಂದೊಂದೇ ಅಂಗವನ್ನು ಕಡಿಮೆಗೊಳಿಸುತ್ತ ಅಂಗವಿಕಲ ಕಲೆಯನ್ನಾಗಿ ಮಾಡುತ್ತಿರುವ ಸೂಚನೆ ಇಂದು ಕಂಡುಬರುತ್ತಿದೆ. ಇಂದು ಈ ರೀತಿಯಾಗಿ ಕಲಿಸುವ ಪರಂಪರೆ ಇಲ್ಲವಾದ್ದರಿಂದ ತಾಳದ ಲಯ ಸಿದ್ಧಿಯಾದ ಕ್ಷಣವೇ ರಂಗದಲ್ಲಿ ಕಾಣಿಸಿಕೊಳ್ಳುವದಾಗಿದೆ. ಇನ್ನು ಕೆಲವರಿಗೆ ತಾಳದ ಲಯ ಸಿದ್ಧಿಯಾಗದಿದ್ದರೂ ಸಹ ಕೇವಲ ಅರ್ಥಗಾರಿಕೆಯಿಂದಲೇ ರಂಗಕ್ಕೆ ಬರುವುದು ಕಂಡುಬರುತ್ತದೆ. ಆದ್ದರಿಂದ ಯಕ್ಷಗಾನದಲ್ಲಿ ನೃತ್ಯ, ನೃತ್ತ, ನಾಟ್ಯ, ರಸ, ಭಾವ, ಪಾತ್ರಪೋಷಣೆ ಮುಂತಾದವುಗಳು ರಂಗದಿಂದಷ್ಟು ದೂರವಾದದ್ದು ಸ್ಪಷ್ಟವಾಗಿ ಗೋಚರಿಸುತ್ತದೆ. ತಾಳ, ಲಯಗಳು ಸಿದ್ಧಿಯಾದ ಕೆಲವು ಕಲಾವಿದರಲ್ಲಿಯೂ ಸಹ ರಸ, ಭಾವ, ಔಚಿತ್ಯಪೂರ್ಣವಾದ ನೃತ್ಯ, ಪಾತ್ರ ಪೋಷಣೆಗೆ ಒತ್ತು ಕೊಡುವ ಮಾತುಗಳ ಕೊರತೆ ಕಂಡು ಬರುತ್ತದೆ. ಹೀಗಿದ್ದರೂ ಸಹ ಯಕ್ಷಗಾನವು ಇತ್ತೀಚೆಗೆ ತಲಾಗ ಮೊದಲಿಗಿಂತ ಜನಪ್ರಿಯವಾಗುತ್ತಿದೆ. ಒಟ್ಟಿನಲ್ಲಿ ಯಕ್ಷಗಾನದ ಕಲಾಸತ್ವ ಕಡಿಮೆಯಾಗುತ್ತಿದ್ದರೂ ಜನಪ್ರಿಯತೆ ಹೆಚ್ಚುತ್ತಿದೆ ಎನ್ನಬಹುದು.

ಯಕ್ಷಗಾನಕ್ಕೆ ಹಸ್ತಾಭಿನಯ ಬಂದದ್ದು ಕಥಕ್ಕಳಿಯಿಂದ'[13] ಎಂಬುದು ಕೆಲವು ವೇಷಧಾರಿಗಳ ಅಭಿಪ್ರಾಯವಾದರೆ ಯಕ್ಷಗಾನ ಕಲಾವಿದರಿಗೆ ಹಸ್ತಾಭಿನಯಕ್ಕೆ 'ಹಸ್ತ ಲಕ್ಷಣ ದೀಪಿಕಾ'ಗ್ರಂಥವು ಆಕರವಾಗಿದೆ...."[14] ಎಂಬ ಅಭಿಪ್ರಾಯವು ಇದೆ. ಕಥಕ್ಕಳಿ ಕಲಾವಿದರಿಗೆ ಹಸ್ತಾಭಿನಯಕ್ಕೆ ಆಕರವಾದ 'ಹಸ್ತ ಲಕ್ಷಣ ದೀಪಿಕಾ ಗ್ರಂಥದ ಹಸ್ತಾಭಿನಯಕ್ಕೂ ಯಕ್ಷಗಾನ ವೇಷಧಾರಿಗಳು ವಿನಿಯೋಗಿಸುವ ಹಸ್ತಗಳಿಗೂ ಸಾಕಷ್ಟು ಅಂತರಗಳಿವೆ. ಉದಾಹರಣೆಗೆ : ಯಕ್ಷಗಾನ ವೇಷಧಾರಿಗಳು ಶಿಖರ ಹಸ್ತದಿಂದ ಪ್ರಶ್ನೆ ಕೇಳುವಿಕೆ, ಬಿಲ್ಲನ್ನು ತೋರಿಸುವಿಕೆ, ರಾಮಾವತಾರ ಮುಂತಾದವುಗಳನ್ನು ಅಭಿನಯಿಸಿದರೆ, 'ಹಸ್ತ ಲಕ್ಷಣ ದೀಪಿಕಾ'ದ ಶಿಖರಹಸ್ತವು ಇದಾಗಿರದೇ ಶಿಖರ ಹಸ್ತವೆಂದು ಕರೆದು ಕಣ್ಣನ್ನು ಕಿವಿಯನ್ನು ತೋರಿಸುವುದಕ್ಕೆ, ನಡೆಯುವುದಕ್ಕೆ (ಕರ್ತರಿ ಮುಖ ಹಸ್ತವನ್ನು) ವಿನಿಯೋಗಿಸುತ್ತಾರೆ. ಇದೇ ರೀತಿ ಅನೇಕ ಹಸ್ತಗಳಲ್ಲಿಯೂ ಸಹ ವ್ಯತ್ಯಾಸಗಳನ್ನು ಅರಿಯಬಹುದಾಗಿದೆ. ತೆಂಕು ತಿಟ್ಟಿನ ಕಲಾವಿದರಿಗೆ ಕಥಕ್ಕಳಿಯ ಪ್ರಭಾವದ ಯಕ್ಷಗಾನ ವೇಷಧಾರಿಗಳ ಸಂಪರ್ಕವಿದ್ದ ಕಾರಣ ಅಲ್ಲಲ್ಲಿ ಪ್ರಭಾವವನ್ನು ಗುರುತಿಸಲು ಸಾಧ್ಯವಿದೆ. ಬಡಗುತಿಟ್ಟು ಉ.ಕ.ದ ವೇಷಧಾರಿಗಳು ಕನ್ನಡಿಯನ್ನು ತೋರಿಸುವುದಕ್ಕೆ ಪತಾಕಾ ಹಸ್ತವನ್ನು ವಿನಿಯೋಗಿಸಿದರೆ, ತೆಂಕಿನ ಕೆಲವು ವೇಷಧಾರಿಗಳು ತ್ರಿಪತಾಕ ಹಸ್ತವನ್ನು ವಿನಿಯೋಗಿಸುತ್ತಾರೆ. ಇದಕ್ಕಿಂತಲೂ ಹೆಚ್ಚಾಗಿ ಕಾಸರಗೋಡು ಕುಂಬಳೆ ಮುಂತಾದ ಸ್ಥಳಗಳಿಂದ ಬಂದ ಯಕ್ಷಗಾನ ವೇಷಧಾರಿಗಳಲ್ಲಿ ಇದನ್ನು ಹೆಚ್ಚು ಕಾಣಬಹುದು.

ಯಕ್ಷಗಾನ ಹಸ್ತಾಭಿನಯಕ್ಕೆ ಯಾವುದಾದರೂ ಗ್ರಂಥ ಆಕರವಾಗಿರಬಹುದೆ ? ಎಂಬ ಜಿಜ್ಞಾಸೆಯಿಂದ ಅನೇಕ ಕಲಾವಿದರನ್ನು ಪ್ರಶ್ನಿಸಿದಾಗ ಅದರ ಕುರಿತು ಖಚಿತ ವಾದ ಉತ್ತರ ಸಿಗಲಿಲ್ಲ. ಆದರೆ ಅನೇಕ ಹಿರಿಯ ಕಲಾವಿದರು "ಇದಕ್ಕೆ 'ಭರತ ಶಾಸ್ತ್ರ' ಗ್ರಂಥ ಆಧಾರ ಎಂಬುದಾಗಿ ತನ್ನ ತಂದೆಯು, ಹಿರಿಯರು ತನಗೆ ಕಲಿಸಿದ ಗುರುಗಳು ಹೇಳುತ್ತಿದ್ದರು" ಎಂಬ ಅಭಿಪ್ರಾಯ ಸಿಗುತ್ತಿತ್ತು. ಇದಕ್ಕೆ ಆಧಾರವಾಗಿ ಕನ್ನಡ ಲಿಪಿಯಲ್ಲಿದ್ದ, ಮೈಸೂರಿನ ವೆಂಕಟ ಸುಂದರಾಸಾನಿ ಎಂಬುವ ಳಿಂದ ಸಂಕಲಿಸಲ್ಪಟ್ಟ 'ರಸಿಕ ಜನ ಮನೋಲ್ಲಾಸಿನೀಸಾರ ಸ್ರಂಗಹ ಭರತ ಶಾಸ್ತ್ರ'[16] ಎಂಬ ಗ್ರಂಥವೊಂದು ನನಗೆ ಸಿಕ್ಕಿತು. ಅದನ್ನು ಓದಿದಾಗ ಯಕ್ಷಗಾನ ಸಭಾ ಲಕ್ಷಣಕ್ಕೆ ಆಕರವಾದ ಎಲ್ಲಾ ಶ್ಲೋಕಗಳೂ ಗ್ರಂಥದಲ್ಲಿ ಇದ್ದದ್ದು ಕಂಡುಬಂದಿತು.[17] ಅವಳೇ ಆ ಗ್ರಂಥವನ್ನು 'ಭರತಶಾಸ್ತ್ರ' ಎಂಬ ಹೆಸರಿನಿಂದ ಕರೆದದ್ದು ಅಲ್ಲಿಯೇ ಇವೆ. ದಿ : ಕೃಷ್ಣ ಭಂಡಾರಿ ಸೋಂದಾ ಇವರು 'ಯಕ್ಷಗಾನ ಕೈಪಿಡಿ'ಯಲ್ಲಿ "ಶ್ರೀ ಗೋಪಾಲ ನರಸಿಂಹ ಭಟ್ಟ" ಇವರು ತಮ್ಮ ಮನೆಯಲ್ಲಿ ಹಿಂದಿನಿಂದ ಸಂಗ್ರಹಿಸಿಟ್ಟ ಭರತಶಾಸ್ತ್ರ ಎಂಬ ಪುಸ್ತಕದೊಳಗೆ ಇದ್ದ ಯಕ್ಷಗಾನ ಕಲೆಗೆ ಉಪಯುಕ್ತವಾದ ಶ್ಲೋಕಗಳನ್ನು ಆಯ್ದು ಗ್ರಂಥದ ಅರ್ಥ ಸಹಿತ ಬರೆದು ಕೊಟ್ಟದ್ದು ತುಂಬಾ ಸಂತೋಷದ ಸಂಗತಿಯಾಗಿದೆ ಎಂದು ಹೇಳಿ ಮುಂದೆ ರಸಿಕಜನ ಮನೋಲ್ಲಾಸಿನೀ ಭರತಶಾಸ್ತ್ರ ಸಂಗ್ರಹ ಎಂದು ಬರೆದು ಶ್ಲೋಕಗಳನ್ನು ಅರ್ಥಗಳನ್ನು ಬರೆದಿದ್ದಾರೆ.[18] ಶ್ರೀಯುತ ಮಹಾಬಲ ಹೆಗಡೆ ಕೆರೆಮನೆಯವರು "ಮೂಡ್ಕಣಿ ನಾರಾಯಣ ಹೆಗಡೆಯವರಲ್ಲಿ ಒಂದು ಜೀರ್ಣವಾದ ಒಂದು ಕನ್ನಡ ಅನುವಾದದ ನಾಟ್ಯ ಶಾಸ್ತ್ರದ ಪ್ರತಿ ಇತ್ತು, ಅದನ್ನು ನಾನು ನೋಡಿದ್ದೇನೆ. ಕೆಲದಿನ ನಾನು ಅದನ್ನು ತಂದು ಇಟ್ಟುಕೊಂಡಿದ್ದೆ. ಅದರ ಹೆಸರು ಈಗ ನನಗೆ ಸರಿಯಾಗಿ ನೆನಪಿಲ್ಲ. ಬಹುಶಃ ಮೈಸೂರಿನ ಯಾವುದೋ ಹೆಣ್ಣುಮಗಳು ಅದನ್ನು ಪ್ರಿಂಟ್‌ಮಾಡಿಸಿದ್ದಳು ಎಂದು ನನ್ನ ಸ್ಥೂಲ ನೆನಪು. ಎಂದಿದ್ದಾರೆ. ಬಹುಶಃ ಇದೇ ಅದರ ಪ್ರತಿಯಾಗಿರಲು ಸಾಧ್ಯ ಎಂದು ನನ್ನ ಅನಿಸಿಕೆ. ಅದೇ ಗ್ರಂಥದಲ್ಲಿ 'ಕೌತ' ಎಂಬ ನೃತ್ತವನ್ನು ಹೆಸರಿಸಿ ಅದರ ಲಕ್ಷಣವನ್ನು—

"ಪಾಠಾಕ್ಷರೇಣ ಸಂಯುಕ್ತಂ ದೇವತಾ ವಿಷಯಾತ್ಮಕಂ
ನಾನಾರ್ಥ ಚಿತ್ರ ಸಂಯುಸ್ತಿಕ್ತಿತ್ಪಾಂತ ಕೌತ ಮುಚ್ಯತೇ" ಎಂದು ಹೇಳಿದ್ದಾಳೆ.

ಅದೇ ರೀತಿ (ಪಾಠಾಕ್ಷರ-ತತ್ಕಾರ) ದಿಂದ ಕೂಡಿದ ಗಣಪತಿ ವಿಷಯಾತ್ಮವಾದ ಗಣಪತಿ ಕೌತುಕವು ಸಭಾ ಲಕ್ಷಣದಲ್ಲಿದ್ದು "ಇಂದು ಭರತನಾಟ್ಯ ಪರಂಪರೆಯಲ್ಲಿ ಕೌತವು ಮಾಯವಾಗಿ ಹೋಗಿದ್ದರೂ ಸಹ ಯಕ್ಷಗಾನದಲ್ಲಿ ಮೂಲ ಕಥಾ ಭಾಗದ ಮೊದಲು ಕೌತವನ್ನು ಅಭಿನಯಿಸುತ್ತಾರೆ"[19] ಎಂಬ ಅಭಿಪ್ರಾಯವು ಯಕ್ಷಗಾನ ಹಾಗೂ ಭರತ ಶಾಸ್ತ್ರದ ಸಂಬಂಧವನ್ನು ಸೂಚಿಸುತ್ತದೆ.

ಹಸ್ತಾಭಿನಯದ ಮಾಹಿತಿಯನ್ನು ಸಂಗ್ರಹಿಸಲು ಹೋದಾಗ ಅನೇಕ ಹಿರಿಯ ಕಲಾವಿದರು ಸರಿಯಾಗಿ ನೆನಪಿಲ್ಲದಿದ್ದರೂ ಹಸ್ತಾಭಿನಯದ ಕುರಿತು ಹೇಳಿದ—

"ತುರಗೇ ಖಂಡನೆ ವಾಯು ವನೇ ವಸ್ತು ನಿಷೇಧಕೆ
ಕುಚಸ್ಥಳೆ ನಿಶಾಯಾಂಚ ಶಯನೇ ಗಮನೋದಿತೆ"[20]

ಶ್ಲೋಕಗಳು ಈ ಗ್ರಂಥದಲ್ಲಿ ಇವೆ ಅಲ್ಲದೇ ಅವರು ಅಭಿನಯಿಸಿ ತೋರಿಸುವ ಹಸ್ತಾಭಿನಯಕ್ಕೂ ಇಲ್ಲಿ ಹೇಳಿದ ಹಸ್ತಾಭಿನಯಕ್ಕೂ ಸಾಮ್ಯ ಇದ್ದದ್ದು ಪ್ರಮುಖಾಂಶವಾಗಿದೆ. ಉಳಿದ ನಾಟ್ಯಶಾಸ್ತ್ರ ಗ್ರಂಥಗಳಲ್ಲಿಲ್ಲದ ಬಾಣಹಸ್ತವು ಯಕ್ಷಗಾನದಲ್ಲಿದ್ದು, ಈ ಗ್ರಂಥದ ಆಕರವೇ ಆಗಿದೆ[21] ಈ ಎಲ್ಲ ಆಧಾರಗಳಿಂದ ಯಕ್ಷಗಾನ ವೇಷಧಾರಿಗಳ ಹಸ್ತಾಭಿನಯಕ್ಕೆ ಆಕರವಾದ್ದು "ರಸಿಕ ಜನ ಮನೋಲ್ಲಾಸಿನೀ ಸಾರ ಸಂಗ್ರಹ ಭರತ ಶಾಸ್ತ್ರ" ವೆಂದು ಹೇಳಬಹುದು.

## ಅಡಿ ಟಿಪ್ಪಣಿಗಳು

1. ನಾಟ್ಯಶಾಸ್ತ್ರ ;—ಭರತ ಮುನಿ.
2. ಸಾಹಿತ್ಯ ದರ್ಪಣ ;—ವಿಶ್ವನಾಥ.
3. ಅಭಿ + ನೀ [ನಯ್]. ಅಭಿ + ಣಿಚ್ [ಪ್ರಾಪಣೆ. ಅಚ್]
4. "ಆಂಗಿಕೋವಾಚಿಕಶ್ಚೈವಮಾಽಹಾರ್ಯೋಽಸಾತ್ವಿಕಸ್ತಥಾ.
5. ಶಬ್ದಾರ್ಥಕೌಸ್ತುಭ [ಸಂಸ್ಕೃ-ಕನ್ನಡ ಶಬ್ದಕೋಶ] ಚಕ್ರವರ್ತಿ ರಾಜ ಗೋಪಾಲಾಚಾರ್ಯ.
6. ಹಸ್ತಾಭಿನಯಕ್ಕೆ ಸಾಮಾನ್ಯವಾಗಿ "ಮುದ್ರೆ" ಎಂದು ಕರೆಯುವುದು ರೂಢಿಯಲ್ಲಿದೆ. ಆದರೆ ಭರತನಾಗಲಿ ಇತರರಾಗಲಿ ಹಸ್ತಾಭಿನಯವನ್ನು ಮುದ್ರೆ ಎಂಬುದಾಗಿ ಹೆಸರಿಸಿಲ್ಲ. ಮುದ್ರೆಗಳು ವೇದಕಾಲದಿಂದಲೇ ಬಂದಿದ್ದು ವಿಶೇಷತಃ ವೈದಿಕ, ತಾಂತ್ರಿಕ ಕರ್ಮ ಮತ್ತು ಪೂಜಾ ವಿಧಿಗಳಲ್ಲಿ ಪ್ರಯೋಗಿಸುವ ಹಸ್ತ [ಕೈಕರಣ]ಗಳನ್ನು 'ಮುದ್ರಾ' ಎಂದು ಕರೆಯುವರು. ಆ ವಿಧಿಗಳಲ್ಲಿರುವ ಮೃಗೀ, ಹಂಸಿ, ಮುಂತಾದವುಗಳು (ಹೋಮ ಮುದ್ರಾಸ್ತ್ರಯೀ ಪ್ರೋಕ್ತಾಮ್ಯಗೀ, ಹಂಸೀ, ಚಸೂಕರೀ"] ನಾಟ್ಯ ಗ್ರಂಥಗಳಲ್ಲಿ ಉಪಲಬ್ಧವಾಗಿದೆ.
7. ನಾಟ್ಯ, ನೃತ್ಯ, ನೃತ್ತ ಈ ಮೂರು ಸಹ ಬೇರೆ ಬೇರೆಯಾಗಿದ್ದು ರಸಭಾವ ರಹಿತವಾದದ್ದು ನೃತ್ತವೆಂದು [ರಸಭಾವವಿಹೀನಂ] ರಸಭಾವಸಹಿತವಾದುದು. [ರಸಭಾವ ವ್ಯಂಜಕಾದಿಯುತಂ ನೃತ್ಯ ಮಿತೀರ್ಯತೇ] ನೃತ್ಯವೆಂದೂ ತಾಳ ಲಯದಿಂದ ಕೂಡಿದ್ದು [ತಾಲ ಲಯಾಶ್ರಯ್] ನಾಟ್ಯವೆಂದು "ಅಭಿನಯ ದರ್ಪಣ" ರಸಿಕಜನಮನೋಲ್ಲಾಸಿನಿಸಾರ ಸಂಗ್ರಹ ಭರತಶಾಸ್ತ್ರ ಮತ್ತು "ಅಮರಕೋಶ"ಗಳು ತಿಳಿಸುತ್ತವೆ. ನೃತ್ತ ಹಸ್ತವು ಸೌಂದರ್ಯಕ್ಕೆ ಸೀಮಿತವಾಗಿದ್ದು ನೃತ್ಯ ಹಸ್ತವು ಸೌಂದರ್ಯ, ರಸಗಳೊಂದಿಗೆ ವಸ್ತು ಮುಂತಾದವುಗಳನ್ನು ಪರಿಚಯಿಸುತ್ತದೆ.
8. ಗೋವಿಂದ ದೀಕ್ಷಿತನು "ಸಂಗೀತ ಸುಧಾ" ಗ್ರಂಥದಲ್ಲಿ "ಯಕ್ಷಾಘಗೀತಮಪಿ ಗಾನಶೈಲೀ" ಎಂದು ಹೇಳಿ ಯಕ್ಷಗಾನವು ಗಾನರೂಪವಾದದ್ದು ಎಂದು ಸೂಚಿಸುತ್ತಾನೆ. ತೆಲಗು ಯಕ್ಷಗಾನವೂ ಸಹ ವಿವಿಧ ರಾಗ ತಾಳಗಳಿಂದ ಕೂಡಿದ್ದ ಗಾನಶೈಲಿಯಾಗಿತ್ತು ಎಂದು ಹೇಳಿ ವಿವಿಧ ರಾಗಗಳನ್ನು ತಾಳಗಳನ್ನು ಹಾಡಿ ತೋರಿಸಿದ್ದನ್ನು ಲೇಖಕನು [16–3–91] ಮದುರೈ ಕಾಮರಾಜ ವಿಶ್ವವಿದ್ಯಾಲಯದ Dept. of Telugu and

comparative Literature ನಲ್ಲಿ ನಡೆದ Dramas in Dravidian Languages (Seminar] ನಲ್ಲಿ ಎಚ್. ಎಸ್. ಬ್ರಹ್ಮಾನಂದರಿಂದ ಕೇಳಿದ್ದಾನೆ. ಅಲ್ಲದೇ ಪ್ರಶ್ನೋತ್ತರದ ಕಾಲದಲ್ಲಿ ಹಿಂದೆ ಯಕ್ಷಗಾನವೂ ಸಹ ಹರಿಕಥೆಯಂತೆಯೇ ಇದ್ದಿತ್ತು ಎಂಬುದು ಚರ್ಚೆಯಿಂದ ನಿರ್ಣಯಿತವಾಯಿತು.

9. ಯಕ್ಷಗಾನವು ಜಾನಪದ ಕಲೆ ಎಂಬ ಹಣೆಪಟ್ಟಿಯನ್ನು ಹಚ್ಚಿಕೊಂಡಿದ್ದರೂ ಸಹ ಅದು ಶಾಸ್ತ್ರೀಯ ಕಲೆಗಳ ತಂತ್ರಗಳಿಂದ ಸಮೃದ್ಧವಾಗಿದೆ. ಈ ಕುರಿತು ಇದೇ ಲೇಖಕನಿಂದ ಒಂದು ಗ್ರಂಥವು ಹೊರಬರುವುದಿದ್ದು, ಯಾವ ಯಾವ ಶಾಸ್ತ್ರೀಯ ರಂಗತಂತ್ರಗಳು ಯಕ್ಷಗಾನ ಕಲೆಯಲ್ಲಿ ಇದೆ ಎಂಬುದು ಅದರಲ್ಲಿದೆ.

10. ಯಕ್ಷಗಾನದಲ್ಲಿ, ಉಳಿದ ಕಲೆಗಳಾದ ಕಥಕ್ಕಳಿ, ಕೂಟಿಯಾಟ್ಟಂ, ಕೂಚಿಪುಡಿ, ಭರತನಾಟ್ಯ ಮುಂತಾದ ಕಲೆಗಳಲ್ಲಿದ್ದಷ್ಟು ನೇತ್ರಾಭಿನಯ, ಭ್ರೂಅಭಿನಯ, ಹಸ್ತಾಭಿನಯಗಳಿಲ್ಲ. ಯಕ್ಷಗಾನದಲ್ಲಿ ವಾಚಿಕಾಭಿನಯವಾಗಿ ಸಂಭಾಷಣೆಯೂ ಪ್ರಧಾನಭಾಗವಾದ್ದರಿಂದ ಇವುಗಳ ಕೊರತೆ ಕೊರತೆಯಾಗಿ ಕಾಣಿಸುವುದಿಲ್ಲ. ಅತೀ ಹೆಚ್ಚೂ ಅಲ್ಲದ ಅತಿ ಕಡಿಮೆಯೂ ಅಲ್ಲದ ಅಭಿನಯವು ಯಕ್ಷಗಾನದ ವಿಶಿಷ್ಟ ಕೊಡುಗೆಯಾಗಿದೆ. ಸಾತ್ವಿಕಾಭಿನಯವೆಂದರೆ ಸತ್ವಗುಣಗಳಿಂದ ಉಂಟಾಗುವ ಗುಣಗಳು ["ಸತ್ವೇನ ಮನೋವೃತ್ತ್ಯಾ ನಿವೃತ್ತಿ :"] ಎಂದರೆ ಮನಸ್ಸಿನಲ್ಲಿ ಹುಟ್ಟುವುದು. ಆದ್ದರಿಂದ ಸಾತ್ವಿಕಾಭಿನಯವೆಂದರೆ ಮನಸ್ಸಿನಲ್ಲಿ ಉದ್ಭವಿಸಿದ ಭಾವನೆಗಳ ಅಭಿನಯ ಎನ್ನಬಹುದು. ಅಭಿನವ ಗುಪ್ತನು "ಸತ್ವಂ ನಾಮ ಮನಃ ಪ್ರಭಾವಂ............ಲೋಕಸ್ವಭಾವಾನುಕರಣತ್ವಾಚ್ಚ ನಾಟ್ಯಸ್ಯ ಸತ್ವಮಿಪ್ಸಿತಂ" ಎಂದಿದ್ದಾನೆ. ಸಾತ್ವಿಕ ಭಾವಗಳು ಸ್ತಂಭ [ನಿಶ್ಚಲವಾಗಿ ನಿಲ್ಲುವುದು] ಸ್ವೇದ [ಬೆವರುವುದು] ಕ್ರೋಧ, ರೋಮಾಂಚ, ಸ್ವರಭೇದ, ವೇಪಥು, ವೈವರ್ಣ್ಯ ಅಶ್ರು, ಪ್ರಲಯ. ಯಕ್ಷಗಾನದಲ್ಲಿ ಈ ಅಭಿನಯಗಳು ಕಡಿಮೆ ಕಂಡು ಬರುತ್ತಿದ್ದು ಅಲ್ಲಲ್ಲಿ [ಗದಾಪರ್ವದಲ್ಲಿ ಭೀಮನ ಗರ್ಜನೆಯನ್ನು ಕೇಳಿ ಕೌರವನು ಓಡುವಾಗ] ಕ್ರೋಧ, ಸ್ತಂಭ, ಮುಂತಾದವುಗಳು ಕಂಡುಬರುತ್ತದೆ.

11. ವಿಮರ್ಶಕರ, ಕಲಾವಿದರ ಅಭಿಪ್ರಾಯಗಳನ್ನು ಪರಿಶಿಷ್ಟದಲ್ಲಿ ಕೊಡಲಾಗಿದೆ.

12. ಜಿ. ಪಿ. ಹಾಸ್ಯಗಾರ ಕರ್ಕಿ.

13. ಈ ಅಭಿಪ್ರಾಯವನ್ನು ಹೇಳಿದವರು ತೆಂಕಿನ ಕಲಾವಿದರು ಮಾತ್ರ.

14. ಯಕ್ಷಗಾನ ಕಲಾಲೋಕ ಜಿ. ಆರ್. ಪಾಂಡೇಶ್ವರ.

15. ಹಸ್ತ ಲಕ್ಷಣ ದೀಪಿಕಾ, A Dictionary of Kathakali.
Mudras in Kathakali.
Dictionary of Bharata Natya.

16. ಈ ಗ್ರಂಥವೂ ಸಹ ಅವಳಿಂದ ರಚಿತವಾಗಿರದೆ ಹಿಂದಿನ ನಾಟ್ಯ ಶಾಸ್ತ್ರ ಗ್ರಂಥಗಳ ಸಂಕಲನವಾಗಿದೆ.
17. ಸಭಾ ಲಕ್ಷಣದಲ್ಲಿದ್ದ ಕೆಲವು ಶ್ಲೋಕಗಳು ಇಲ್ಲಿರದೆ, ಕೆಲವು ಶ್ಲೋಕಗಳ ಪಾಠಾಂತರಗಳಿವೆ.
18. ಈ ಶ್ಲೋಕಗಳೇ ಯಕ್ಷಗಾನ ಸಭಾ ಲಕ್ಷಣದಲ್ಲಿಯೂ ಇವೆ.
19. ಭರತನಾಟ್ಯ ದಿಗ್ದರ್ಶನ ವಿ. ಎಸ್. ಕೌಶಿಕ.
20. ಜಿ. ಪಿ. ಹಾಸ್ಯಗಾರ.
21. ಅಭಿನಯ ದರ್ಪಣ, ನಾಟ್ಯಶಾಸ್ತ್ರ, ಗ್ರಂಥಗಳಲ್ಲಿ ಇಲ್ಲ. ಅಭಿನಯ ದರ್ಪಣ, ಸಾರ ಸಂಗ್ರಹ ಭರತಶಾಸ್ತ್ರದ ಉಳಿದ ಶ್ಲೋಕಗಳಿಗೆ ಸಾಮ್ಯ ಇದೆ. ಸಭಾ ಲಕ್ಷಣದಲ್ಲಿಯ ಶ್ಲೋಕಗಳು ಅಭಿನಯದರ್ಪಣದಲ್ಲಿಲ್ಲ.

# ಯಕ್ಷಗಾನ ಹಸ್ತಾಭಿನಯ ದರ್ಪಣ

ದಕ್ಷಿಣೋತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳ ಯಕ್ಷಗಾನ ವೇಷಧಾರಿಗಳು ಪತಾಕ, ಅರ್ಧಪತಾಕ, ಶಿಖರ, ಮುಷ್ಠಿ ಸೂಚಿ, ಮೃಗಶೀರ್ಷ, ಸರ್ಪಶೀರ್ಷ, ಸಿಂಹಮುಖ, ಅಲಪದ್ಮ, ಚತುರ, ಹಂಸಾಸ್ಯ, ಊರ್ಣನಾಭ, ಮುಕುಳ, ತಾಮ್ರಚೊಡ, ಬಾಣ, ಶಿಲೀಮುಖ, ತ್ರಿಲಿಂಗ, ಕಟಿಕಾಮುಖ, ತಾರ್ಕ್ಷ್ಯ ಗರುಡ, ಚಕ್ರ, ಶಂಖ, ಕರ್ಕಟ, ಕೀಲಕ, ಪಾಶ, ಕೂರ್ಮ, ವರಾಹ[1] ಹಸ್ತಗಳನ್ನು ಸ್ವೀಕರಿಸಿ ಯಕ್ಷಗಾನ ಪ್ರಸಂಗ ಪದ್ಯಗಳಿಗೆ ಹಸ್ತಾಭಿನಯವನ್ನು ಮಾಡುತ್ತಾರೆ.

ಪತಾಕ ಹಸ್ತದಿಂದ ವೇಷಧಾರಿಗಳು ಈ ಕೆಳಗಿನ ವಸ್ತುಗಳನ್ನು ಅಭಿನಯಿಸುತ್ತಾರೆ.

**ನೃತ್ಯದ ಆರಂಭ :** ನೃತದ ಆರಂಭವು ಎರಡೂ ಕೈಗಳ ಪತಾಕ ಹಸ್ತದಿಂದಲೇ ಆರಂಭವಾಗುವುದು.[2] ಭಾ.ಚಿ.1.

**ಅಶ್ವ :** ಪತಾಕ ಹಸ್ತದ ಕೈಯನ್ನು ಎಡೆಯ ಎದುರಿಗೆ ಪಾರ್ಶ್ವಕ್ಕೆ ಭಾ.ಚಿ. 2ರಲ್ಲಿ ತೋರಿಸಿದಂತೆ ಹಿಡಿದು ಅಭಿನಯಿಸಿದರೆ ಅದು ಅಶ್ವವನ್ನು ಸಂಕೇತಿಸುತ್ತದೆ. ಅಂತೆಯೇ ರಥವನ್ನೂ ಸಹ ಸೂಚಿಸುತ್ತದೆ.[3]

ಉದಾಹರಣೆಗೆ : "ಸೃಷ್ಟಿಗೆ ಅರ್ಜುನನೆಂಬುವನೇ ನೀನು ನಿನ್ನಶ್ವ ಕಟ್ಟಿಕೊಂಡಿಹೆವು ನಾವು. ಸುಧನ್ವ ಕಾಳಗ.

**ಶಯನ :** ಪತಾಕ ಹಸ್ತದ ಕೈಯನ್ನು ತಲೆಯ ಹಿಂದೆ ಪಾರ್ಶ್ವಕ್ಕೆ ಸುಮಾರು 60° ಅಂಶ ಕೋನದಲ್ಲಿ ಬಗ್ಗಿಸಿ, ದೇಹವನ್ನೂ ಸಹ ಅದರ ಆಕಾರಕ್ಕೆ ಒಲಿಸಿ, ಮಲಗುವಂತೆ ಅಭಿನಯಿಸಿದರೆ ಶಯನ, ಮಲಗುವುದನ್ನು ಅಭಿನಯಿಸಿದಂತಾಗುವುದು.

ಉದಾಹರಣೆಗೆ :—ಪಾಪಹೆಚ್ಚಿದೆ : ಕಡಲಶಯನನೇ ಕಾಯೋ ಕರುಣನಿಧಿ. ಕೃಷ್ಣಾರ್ಜುನ ಕಾಳಗ.

**ಗಮನ :** ಎರಡೂ ಕೈಗಳ ಪತಾಕ ಹಸ್ತಗಳನ್ನು ಎದುರುಬದುರು[4] ನಿಲ್ಲಿಸಿ ಮುಂದೆ ಚಲಿಸುವಂತೆ ಅಭಿನಯಿಸಿದರೆ ಗಮನ, ಪ್ರಯಾಣ ಎಂಬುದನ್ನು ಅಭಿನಯಿಸಿದಂತಾಗುವುದು. ಭಾ.ಚಿ. 3

ಉದಾ :—"ಆವಲ್ಲಿಗೆ ಪ್ರಯಣವಯ್ಯ ಪ್ರಾಣಕಾಂತ"—ಸುಧನ್ವಕಾಳಗ

**ನದಿ : ಸಮುದ್ರ** :—ಎರಡುಕೈಗಳ ಪತಾಕ ಹಸ್ತದ ಅಂಗೈಗಳನ್ನು ಭೂಮಿಗೆ ಸಮಾನಾಂತರವಾಗಿ ಇಟ್ಟು ಸಮುದ್ರದ ಅಲೆಗಳಂತೆ ಚಲಿಸಿದರೆ, ನದಿ/ಸಮುದ್ರಗಳನ್ನು ತೋರಿಸಿದಂತಾಗುತ್ತದೆ. ಭಾ.ಚಿ. 4

ಉದಾ :—ವೀರ ದಶರಥ ನೃಪತಿ ವಾರಿಧಿಗೆ ಪ್ರತಿಚಂದನು ಪಟ್ಟಾಭಿಷೇಕ.

**ವೀರತ್ವ** : ಪತಾಕ ಹಸ್ತವನ್ನು ವೀರಮುಖಭಾವದಿಂದ ಮೀಸೆಯ ಮೇಲೆ/ಮೀಸೆಯ ಹತ್ತಿರ ಹಿಡಿದರೆ ವೀರತ್ವ, ಶೌರ್ಯವನ್ನುಅಭಿನಯಿಸಿ ತೋರಿಸಿದಂತಾಗುವುದು. ಭಾ.ಚಿ. 5 ಸ್ತ್ರೀವೇಷವು ಈ ರೀತಿಯಾಗಿ ಅಭಿನಯಿಸುವುದನ್ನು ಯಕ್ಷಗಾನ ಕಲೆಯು ನಿಷೇಧಿಸಿದ್ದು (ಸ್ತ್ರೀ ವೇಷಗಳು ವೀರತ್ವ, ಶೌರ್ಯ, ಮುಂತಾದವುಗಳನ್ನು ಭಾಚಿ. 6 ಅ. ನಲ್ಲಿ ತೋರಿಸಿದಂತೆ ಅಭಿನಯಿಸಿ ತೋರಿಸಬೇಕು.[5] ಭಾ.ಚಿ. 6

ಉದಾ :—ಅಗ್ರಜವೀರ ಅಣ್ಣ ವಾಲಿಯ ನಿಗ್ರಹಿಸದೆ ಚೂಡಾಮಣಿ ಪ್ರಸಂಗ

**ಗಾಳಿ** : ಎರಡು ಕೈಗಳ ಪತಾಕ ಹಸ್ತವನ್ನು ಗಾಳಿ ಬೀಸುವಂತೆ ಚಲಿಸಿದರೆ, ಗಾಳಿ ಬೀಸುವಿಕೆಯ ಸಂಕೇತವಾಗುತ್ತದೆ.

ಉದಾ :—ಬಿರುಗಾಳಿ ಪ್ರಳಯದಬ್ಬರವ ಕಾಣಿಸುತಲಿದೆ. ನಿಸರ್ಗ ಸಂಧಾನ

**ವನ** :—ಪತಾಕ ಹಸ್ತವೆರಡನ್ನು ಸ್ವಸ್ತಿಕಾಕಾರವಾಗಿ ಹಿಡಿದರೆ ಅದು ವನ, ಅರಣ್ಯ ಮುಂತಾದವುಗಳನ್ನು ಸಂಕೇತಿಸುತ್ತದೆ. ಭಾ.ಚಿ. 7. ಈ ಅಭಿನಯದಲ್ಲಿ ಕಿರು ಬೆರಳು ಹಾಗೂ ಉಂಗುರ ಬೆರಳನ್ನು ಭೂಮಿಯ ಕಡೆಗೆ ಬಗ್ಗಿಸಿದರೆ ಗಿಡಮರಗಳನ್ನು ಈ ಹಸ್ತವುಸಂಕೇತಿಸುತ್ತದೆ. ಆದರೆ ಮರಗಿಡಗಳನ್ನು ಸಂಕೇತಿಸುವ ಈ ಹಸ್ತವು ಇಂದು ಯಕ್ಷಗಾನ ರಂಗದಿಂದ ದೂರವಾಗಿ ಹೋಗಿದೆ.[6]

ಉದಾ :—ಅನುಜಾತಕೇಳ್ಸೀತೆ ವನದಿ ಸಂಚರಿಪಾಸೆ ತನಗೆಂದು ಪೇಳಿದ್ದನೆವದಿ
ಸೀತಾವಿಯೋಗ

**ಆಶೀರ್ವಾದ** :—ಕೈಗಳೆರಡರ ಪತಾಕಹಸ್ತದ ಅಂಗೈಯು ಭೂಮಿಗೆ ಸಮಾನಾಂತರವಾಗಿದ್ದು ಮುಖದಲ್ಲಿ ಆಶೀರ್ಭಾವವೂ ಇದ್ದರೆ ಅದು ಆಶೀರ್ವಾದ ಅಭಿನಯ ಸಂಕೇತವಾಗುವುದು.

**ಕಡಿಯುವಿಕೆ** :—ಪತಾಕ ಹಸ್ತದ ಕೈಯಿಂದ ಕಡಿಯುವಂತೆ ಅಭಿನಯಿಸಿದರೆ ಕಡಿಯುವಿಕೆಯನ್ನು ಅಭಿನಯಿಸಿ ತೋರಿಸಿದಂತಾಗುತ್ತದೆ.

**ವಚನವನ್ನು ಕೊಡುವುದು** :—ಒಂದು ಪತಾಕ ಹಸ್ತದ ಅಂಗೈಯ ಮೇಲೆ ಇನ್ನೊಂದು ಪತಾಕ ಹಸ್ತದ ಅಂಗೈಯನ್ನಿಟ್ಟರೆ ಭಾಷೆಯನ್ನಿತ್ತ ಸಂಕೇತವಾಗುವುದು.[7]

ಉದಾ :—ಮಾತೇಗಿತ್ತೆನು ಭಾಷೆಯೆನು—ಕರ್ಣಪರ್ವ.

**ಮಂಚ :**—ಪತಾಹಸ್ತಗಳ ಕೈಗಳನ್ನು ಭಾವಚಿತ್ರ 8ರಲ್ಲಿ ತೋರಿಸಿದಂತೆ ಅಭಿನಯಿಸಿ ತೋರಿಸಿದರೆ ಅದು ಮಂಚ ಎಂಬುದರ ಸಂಕೇತವಾಗುವುದು.

ಉದಾ :—ವಲ್ಲಭೆಯನೊಡಗೂಡಿ ರಾವಣ ಚೆಲ್ವಮಂಚದ ಮೇಲೆ ಮಲಗಿರೆ ಚೂಡಾಮಣಿ.

**ಕನ್ನಡಿ :**—ಪತಾಕಹಸ್ತದ ಅಂಗೈಯು ಮುಖದ ಎದುರಿಗೆ ಬರುವಂತೆ ಹಿಡಿದು ಕನ್ನಡಿಯನ್ನು ನೋಡುವಂತೆ ಅಭಿನಯಿಸಿದರೆ ಅದು ಕನ್ನಡಿಯನ್ನು ಸಂಕೇತಿಸುತ್ತದೆ.[6] ಭಾ.ಚಿ. 9

ಉದಾ :—ಕನ್ನಡಿಯನ್ನು ತೆಗೆದು ನೋಡುತ ಮುಖವು ಚೆನ್ನಾಗಿದೆಯೆಂದು ನಗಾಡುತ್ತ—ಪಂಚವಟ.

**ಸೂರ್ಯ : ಚಂದ್ರ :** ಬಲದ ಕೈಯು ಪತಾಕಹಸ್ತದ ಕೆಳಗಡೆ ಎಡದ ಕೈಯು ಸೂಚಿಹಸ್ತವನ್ನು ಅರ್ಧಚಂದ್ರಾಕಾರವಾಗಿ ತಿರುಗಿಸಿದರೆ ಅದು ಸೂರ್ಯ ಎಂಬುದನ್ನು ಸಂಕೇತಿಸುತ್ತದೆ. ಇದು ವಿರುದ್ಧವಾದರೆ ಚಂದ್ರ ಎಂಬುದನ್ನು ಸಂಕೇತಿಸುತ್ತದೆ. 9 ಭಾ.ಚಿ. 10 ಅ. 10.

ಉದಾ :—ಸರಸಿಜಾಂಬಕಿಯರೇ ಕೇಳಿ ಶಶಿ ಪರಂಪರೆಯೊಳು ರಾಜ್ಯವಾಳಿ—ಭೀಷ್ಮವಿಜಯ.

**ಸೈನಿಕರು :**—ಸಮಾನಾಂತರವಾಗಿರುವ ಒಂದನ್ನೊಂದು ಹಿಂಬಾಲಿಸಿರುವ ಪತಾಕಹಸ್ತಗಳೆರಡು ಸೈನಿಕರು ಎಂಬುದನ್ನು ಸಂಕೇತಿಸುತ್ತದೆ. ಭಾ.ಚಿ. 11.

ಉದಾ :—ಸೇನೆಗಪ್ಪಣೆಕೊಟ್ಟು. ಬಬ್ರುವಾಹನ

**ಸಭೆಯನ್ನು ಸೂಚಿಸುವುದು :**—ಪತಾಹಸ್ತವನ್ನು ಸಭೆಯ ಎದುರಿಗೆ ಅರ್ಧಚಂದ್ರಾಕಾರವಾಗಿ ತಿರುಗಿಸಿ ತೋರಿಸಿದರೆ ಅದು ಸಭೆಯನ್ನು ತೋರಿಸುವ ಅಭಿನಯವನ್ನು ಸಂಕೇತಿಸುತ್ತದೆ. ಭಾ.ಚಿ. 12

ಉದಾ :—ನೋಡಿದಯಾ ವಿದುರ ಕೌರವ ಮಾಡಿದೋಲಗವ—ಕೃಷ್ಣಸಂಧಾನ

ಪತಾಕಹಸ್ತವು ಜಲಕ್ರೀಡೆಯ ಅಭಿನಯದಲ್ಲಿ ವಿವಿಧ ರೀತಿಯಿಂದ ವಿನಿಯೋಗಿಸಲ್ಪಟ್ಟದ್ದು ಕಂಡುಬರುತ್ತಿದ್ದು. ಇಲ್ಲಿ ನಾಟ್ಯಧರ್ಮಿಗಿಂತ ಲೋಕಧರ್ಮಿಯೇ ಹೆಚ್ಚು ಪ್ರಭಾವವನ್ನು ಬೀರಿದ್ದು ಕಂಡುಬರುತ್ತಿದೆ.

ಈ ಕೆಳಗಿನ ಅಭಿನಯಗಳು **ಅರ್ಧಪತಾಕ** ಹಸ್ತದ[10] ಸಹಾಯದಿಂದ ಅಭಿನಯಿಸಲ್ಪಡುತ್ತದೆ.

**ಪ್ರವೇಶ** :—ಅರ್ಧಪತಾಕ ಹಸ್ತದ ಕೈಗಳೆರಡನ್ನು ಎದೆಯ ಎದುರಿನಲ್ಲಿ ಚಲಿಸುವಂತೆ. ಅಭಿನಯಿಸಿದರೆ ಅದು ಪ್ರವೇಶಿಸುವುದು ಎಂಬ ಸಂಕೇತವಾಗುತ್ತದೆ. ಭಾ.ಚಿ. 13 ಈ ಅಭಿನಯವು ಒಳಗೆ ಎಂಬ ಅರ್ಥವನ್ನು ಹೊಟ್ಟೆಯ ಎದುರಿಗೆ ತೋರಿಸಿದರೆ ಗರ್ಭಧಾರಣೆ ಎಂಬ ಸಂಜ್ಞೆಯನ್ನು ಕೊಡುತ್ತದೆ.

ಉದಾ :—ಇಂದು ಕುಲಜನೊಲಿದಂದು ಗರ್ಭವನಿತ್ತೆ—ಭಬ್ರುವಾಹನ ಕಾಳಗ

**ಕಣ್ಣುಗಳನ್ನು ಸೂಚಿಸುವುದು** :—ಎರಡು ಕೈಗಳ ಅರ್ಧಪತಾಕಾಹಸ್ತಗಳನ್ನು ಕಣ್ಣುಗಳ ಅಂಚಿನಲ್ಲಿ ಹಿಡಿದು ಅಭಿನಯಿಸಿದರೆ ಕಣ್ಣುಗಳ ಸಂಕೇತವಾಗುತ್ತದೆ.[13]

ಉದಾ :—ಏನಾಯಿತಂಬುಜನೇತ್ರೆ ಮಾನಿನಿಮಾರ್—ಪಟ್ಟಾಭಿಷೇ.

**ಗೆಳೆತನ** :—ಅರ್ಧಪತಾಕಹಸ್ತದ ಕೈಗಳೆರಡನ್ನು ಸಮಾನಾಂತರವಾಗಿ ಒಂದರ ಪಕ್ಕದಲ್ಲಿ ಒಂದನ್ನು ಹಿಡಿದರೆ, ಅಧಿಕ ಚಿಹ್ನೆಯಂತೆ ಹಿಡಿದರೆ ಗೆಳೆತನ, ದಾಂಪತ್ಯ ಎಂಬ ಸಂಕೇತವಾಗುವುದು.

ಉದಾ :—ಮಿತ್ರರು ಎಂದೆಂದು ಪುನಹ ಶತ್ರುಗಳಾಗವದುಂಟೆ—ಕೃಷ್ಣಾರ್ಜುನ ಕಾಳಗ.

ಇದನ್ನು ಬೇರ್ಪಡಿಸಿದರೆ ತುಂಡಾಗುವಿಕೆ ಎಂಬ ಸಂಕೇತವಾಗುವುದು.

**ಕೀಲಕ** ಹಸ್ತದಿಂದಲೂ ಸಹ ತೋರಿಸುತ್ತಾರೆ. ಭಾಚಿ. 13

**ಶಿಖರ** ಹಸ್ತದಿಂದ ಯಕ್ಷಗಾನ ವೇಷಧಾರಿಗಳು ಈ ಕೆಳಗಿನ ವಸ್ತುಗಳನ್ನು ಅಭಿನಯಿಯಸಿ ತೋರಿಸುತ್ತಾರೆ.

**ರಾಜ** :—ಎದೆಯ ಎದುರಿಗೆ ಶಿಖರ ಹಸ್ತವನ್ನು ಹಿಡಿಯುವದರಿಂದ ರಾಜ ಎಂಬ ಸಂಕೇಶವಾಗುತ್ತದೆ. ಭಾ.ಚಿ. 14

ಉದಾ :—ದಶರಥನೃಪನೆಂಬ ಧರಣಿಪಾಲಕಗೆ—ಚೂಡಾಮಣಿ.

**ಬಿಲ್ಲು** :—ಶಿಖರ ಹಸ್ತವನ್ನು ಅಡಿಯಷ್ಟು ದೂರ ಎದೆಯಪಾರ್ಶ್ವಕ್ಕೆ ಹಿಡಿದರೆ ಬಿಲ್ಲು ಎಂಬ ಸಂಕೇತವಾಗುವುದು. ಇಂದು ಶಿಖರ ಹಸ್ತದ ಕಿರು ಬೆರಳನ್ನು ವಿಸ್ತರಿಸಿ ತೋರಿಸುವ ಪರಂಪರೆ ಪ್ರಾರಂಭವಾಗಿದೆ. ಈ ಹಸ್ತವು ಬಿಲ್ಲಿನ ಆಕಾರವನ್ನೇ ಹೊಂದಿರುವುದರಿಂದ ಈ ಹಸ್ತವು ಸೂಕ್ತವಾಗುವುದು.[12]

**ಪ್ರಶ್ನೆ ಕೇಳುವಿಕೆ :** ಎರಡು ಕೈಗಳ ಶಿಖರ ಹಸ್ತವನ್ನು ಎದೆಯ ಎದುರಿಗೆ : ಪಾರ್ಶ್ವಕ್ಕೆ ನಿಲ್ಲಿಸಿ ಮಣಿಕಟ್ಟನ್ನು ಲಾಸ್ಯಪೂರ್ಣವಾಗಿ ಅರ್ಧಚಂದ್ರಾಕಾರವಾಗಿ, ತಿರುಗಿಸಿದರೆ ಪ್ರಶ್ನಿಸಿದಂತಾಗುವುದು.12 ಸಿಟ್ಟಿನಿಂದ ಪ್ರಶ್ನಿಸುವಾಗ ಲಾಸ್ಯ ಮತ್ತು ಅರ್ಧಚಂದ್ರಾಕಾರ ಬೇಕಿಲ್ಲ. ಹಸ್ತವನ್ನು ಮೇಲಿಂದ ಕೆಳಗೆ ಕೆಳಗಿನಿಂದ ಮೇಲೆ ಅಭಿನಯಿಸಬೇಕು.

ಉದಾ. : ಪರಮಸುಂದರಿ ಪೇಳೀನ್ಯಾರೆ—ಭೀಷ್ಮವಿಜಯ.

**ಹಲ್ಲುಜಜ್ಜುವಿಕೆ :** ಶಿಖರಹಸ್ತದ ಹೆಬ್ಬೆರಳು ಹಲ್ಲುಗಳ ಎದುರಿಗೆ ಬರುವಂತೆ ಮಾಡಿ ಹಲ್ಲುಗಳನ್ನು ತೋರಿಸಿ ಹಲ್ಲುಜಜ್ಜುವಂತೆ ಅಭಿನಯಿಸಿದರೆ ಹಲ್ಲುಜಜ್ಜುವುದನ್ನು ಅಭಿನಯಿಸಿದಂತಾಗುವುದು. ಈ ಪರಂಪರೆಯು ತೆಂಕಿನಲ್ಲಿ ಮಾತ್ರವಿದ್ದು ಬಡಗು (ಉ. ಕ.) ತಿಟ್ಟಿನಲ್ಲಿ ಅರ್ಧಪತಾಕೆ/ಸೂಚಿಹಸ್ತದಿಂದ ತೋರಿಸುತ್ತಾರೆ. [14] ಕೆಲವು ವರ್ಷಗಳ ಹಿಂದೆ ಹಲ್ಲುಜಜ್ಜುವಿಕೆಯನ್ನು ಕಟಕಾಮುಖ ಹಸ್ತದಿಂದ ಅಭಿನಯಿಸುತ್ತಿದ್ದರೆಂಬುದನ್ನು ಡಾ. ವಿ. ರಾಘವನ್‌ರು ಗುರುತಿಸಿದ್ದಾರೆ.[15] ನನಗೆ ಈ ಹಸ್ತದ ಅಭಿನಯವು ಯಾವ ವೇಷಧಾರಿಗಳಿಂದಲೂ ನೋಡಲು ಸಿಗಲಿಲ್ಲ. ಕೃಷ್ಣಪ್ಪ, ಗಣಪತಿ ಪ್ರಭುಗಳು ಈ ಹಸ್ತವನ್ನು ವಿನಿಯೋಗಿಸುತ್ತಿದ್ದರಂತೆ.[16]

**ಗಂಟೆ :** ಶಿಖರ ಹಸ್ತವನ್ನು ಗಂಟೆಯನ್ನು ತೂಗಿದಂತೆ ಅಭಿನಯಿಸಿ ತೋರಿಸಿದರೆ ಗಂಟೆ ತೂಗಿದ ಸಂಜ್ಞೆಯಾಗುವುದು.

ಉದಾ. : ಚರಣಪೂಜೆಗೈದು ಮಂಗಳಾರತಿ ಎತ್ತಿ (ಸುಭದ್ರಾ ಕಲ್ಯಾಣ)

**ವೀರತ್ವ :** ಶಿಖರ ಹಸ್ತವನ್ನು ಎದೆಯ ಎದುರು ಮುಖದಲ್ಲಿ ವೀರ ಭಾವದೊಂದಿಗೆ ಹಿಡಿದರೆ ವೀರತ್ವದ ಅಭಿನಯವಾಗುವುದು. ಛಾಚಿ. 14ಅ.

ಉದಾ. : ಪರಮವಿಕ್ರಮದೊಳು ಸಕಲರಗೆಲಿದರ್ಗೆ—ಭೀಷ್ಮ ವಿಜಯ.

ಮಲ್ಲಯುದ್ಧ, ಶಕ್ತಿ ಗಡ್ಡಗಳನ್ನು ಯಕ್ಷಗಾನ ವೇಷಧಾರಿಗಳು **ಮುಷ್ಟಿ ಹಸ್ತ**ದಿಂದ ಅಭಿನಯಿಸುತ್ತಾರೆ.

**ಮಲ್ಲಯುದ್ಧ :** ಮುಷ್ಟಿಹಸ್ತದ ಒಂದು ಅಥವಾ ಎರಡು ಕೈಗಳನ್ನು ಎತ್ತಿ ತೋರಿಸುವ ಅಭಿನಯದಿಂದ : ಮಲ್ಲಯುದ್ಧವನ್ನು ಅಭಿನಯಿಸುತ್ತಾರೆ. ಈ ಅಭಿನಯವು ಶಕ್ತಿ-ವೀರತ್ವದ ಸಂಕೇತವೂ ಆಗಿರುತ್ತದೆ.

ಉದಾ. ಮಲ್ಲದೈತ್ಯರಿಮ್ಮ ರಣದಿಗೆಲ್ವಪಾಯವು (ಇಂದಜಿತು ಕಾಳಗ)

**ಗಡ್ಡವನ್ನು ತೋರಿಸುವಿಕೆ :** ಮುಷ್ಟಿಹಸ್ತವನ್ನು ಚಿಬುಕದ ಕೆಳಗೆ ಹಿಡಿದು

ಮೇಲಿನಿಂದ ಕೆಳಗೆ, ಕೆಳಗಿನಿಂದ ಮೇಲೆ ಚಲಿಸಿದರೆ ಗಡ್ಡ ಅಥವಾ ಗಡ್ಡಧಾರಿ, ವೃದ್ಧ ಎಂಬ ಅಭಿನಯವಾಗುವುದು. ಅಭಿನಯವನ್ನು ಚಾರಕ, ವಿದೂಷಕ ಮುಂತಾದ ಪಾತ್ರಗಳು ಮಾತ್ರ ಈ ಅಭಿನಯವನ್ನು ತೋರಿಸಬೇಕು.[17]

ಉದಾ. : ವೃದ್ಧರು ನಾವು ಏಳಲಾರೆವು (ಚೂಡಾಮಣಿ)

**ಸೂಚಿಹಸ್ತ**ದಿಂದ ಈ ಕೆಳಗಿನ ಅಭಿನಯವು ಯಕ್ಷಗಾನದಲ್ಲಿ ಅಭಿನಯಿಸಲ್ಪಡುತ್ತದೆ

**ಮೂಲೆ/ಚಂದ್ರ/ಸೂರ್ಯ** : ವೇಷಧಾರಿಗಳು ಸೂಚಿ ಹಸ್ತವನ್ನು ಯಾವುದಾದರೊಂದು ಮೂಲೆಯತ್ತ ತೋರಿದರೆ ಆಗ ಅಲ್ಲಿರುವ ವಸ್ತುವನ್ನು/ಸ್ಥಳವನ್ನು ಸಂಕೇತಿಸಿದಂತಾಗುತ್ತದೆ. ಆಕಾಶದತ್ತ ತೋರಿಸಿ ಅರ್ಧ/ಪೂರ್ಣ/ವೃತ್ತದಲ್ಲಿ ತಿರುಗಿಸಿದರೆ ಆಗ ಸೂರ್ಯ ಚಂದ್ರರ ಸಂಜ್ಞೆಯು ಇದರಿಂದಾಗುತ್ತದೆ. ಇಂದು ಅನೇಕ ಕಲಾವಿದರು ಸೂಚಿಹಸ್ತದ ಬದಲು **ಸಿಂಹಮುಖ ಹಸ್ತ**ವನ್ನು ವಿನಿಯೋಗಿಸುತ್ತಾರೆ.

ಸತಿ (ಪ್ರಿಯತಮೆ) ಪತಿ (ಪ್ರಿಯತಮ) : ಎಡಗೈಯ ಸೂಚಿಹಸ್ತದ ತುದಿಯು ಗಲ್ಲದ ಬಡವನ್ನು ಛಾಚಿ. 15ರಲ್ಲಿ ತೋರಿಸಿದಂತೆ ಸ್ಪರ್ಶಿಸಿದರೆ ಸ್ತ್ರೀವಾಚಕವು (ಪ್ರಿಯತಮೆ). ಇದು ವಿರುದ್ಧವಾದರೆ ಪುರುಷವಾಚಕ (ಪ್ರಿಯತಮ) ಎಂಬ ಸಂಕೇತವಾಗುವುದು.[17]

ಉದಾ. : ಅಹುದೆನ್ನಯ ರಮಣ (ಬಭ್ರುವಾಹನ ಕಾಳಗ)

**ಆಶ್ಚರ್ಯ ಭಾವನೆ** : ಹಸ್ತಾಭಿನಯವು ಮೇಲಿನಂತಿದ್ದು ಮುಖದಲ್ಲಿ ಆಶ್ಚರ್ಯವಿದ್ದರೆ ಆಶ್ಚರ್ಯಭಾವನೆಯು ಅಭಿನಯವಾಗುತ್ತದೆ.

**ಕೇಳುವಿಕೆ** : ಸೂಚಿಹಸ್ತವನ್ನು ಕಿವಿಯ ಹತ್ತಿರ ಹಿಡಿದು ಕಿವಿಯ ಕಡೆಗೆ ತೋರಿಸುತ್ತ ಅಭಿನಯಿಸಿದರೆ ಕೇಳುವುದು ಎಂಬ ಸಂಜ್ಞೆಯಾಗುತ್ತದೆ.

ಉದಾ. : ನಾರಿಕುಲ ಮಣಿ ಕೇಳು ಎನ್ನಿಂದ ಮೇಲಿನ್ನು (ಲವ-ಲವ ಕಾಳಗ)

ಮೃಗಶೀರ್ಷ ಹಸ್ತದ ಮೂಲಕ ವೇಷಧಾರಿಗಳು ಈ ಕೆಳಗಿನ ವಸ್ತುಗಳನ್ನು ಅಭಿನಯಿಸಿ ತೋರಿಸುತ್ತಾರೆ.

**ಹೆಣ್ಣು/ಗಂಡು** :—ಬಲಗೈಯ ಮೃಗಶೀರ್ಷ ಹಸ್ತವನ್ನು ಛಾಚಿ. 16ರಲ್ಲಿ ತೋರಿಸಿದಂತೆ ಅಭಿನಯಿಸಿದರೆ ಹೆಣ್ಣು ಎಂದೂ ಅದನ್ನೇ ವಿರುದ್ಧವಾಗಿ ಅಭಿನಯಿಸಿ ತೋರಿಸಿದರೆ ಗಂಡು ಎಂದು ಸಂಜ್ಞೆಯಾಗುತ್ತದೆ.[18] ಇವುಗಳನ್ನು ಚಿಕ್ಕದಾಗಿ ಹಿಡಿದರೆ ಹುಡುಗ/ಹುಡುಗಿ ಎಂದಾಗುವುದು.

ಉದಾ :—ತರಳ ನೀನದಾರು–ಪೇಳು–ಸೀತಾವಿಯೋಗ.

**ಕರೆಯುವಿಕೆ :** ಈ ಹಸ್ತದ ಮುಖವನ್ನು ತನ್ನ ಕಡೆಗೆ ತಿರುಗಿಸಿ ಕರೆದರೆ "ಬಾ" ಎಂಬ ಸಂಜ್ಞೆಯು, ಇದನ್ನು ವಿರುದ್ಧವಾಗಿ ಅಭಿನಯಿಸಿದರೆ ಹೋಗು ಎಂಬ ಸಂಜ್ಞೆಯಾಗುತ್ತದೆ.[19] ಓರ್ವ ಹಿರಿಯ ಕಲಾವಿದರ ಅಭಿಪ್ರಾಯವೇನೆಂದರೆ ಪ್ರಿಯತಮ : ತನಯರನ್ನು ಕರೆಯುವಾಗ ಈ ಹಸ್ತವನ್ನು ವಿನಿಯೋಗಿಸಬೇಕು[20].

ಉದಾ :—ಮನಮೋಹನಾಂಗಿ ನೀಬಾರೆ (ಪ್ರತಿಜ್ಞಾಯೌಗಂಧರಾಯಣ)

**ಭಸ್ಮಧಾರಣೆ :** ಮೃಗಶೀರ್ಷ ಹಸ್ತದ ಮೂರು ಬೆರಳುಗಳು ಹಣೆಯ ಎದುರಿಗೆ ಬಂದು ತ್ರಿಪುಂಡ್ರ ಧಾರಣೆಯನ್ನು ಮಾಡುವಂತೆ ಅಭಿನಯಿಸಲ್ಪಟ್ಟರೆ ಇದು ಭಸ್ಮಧಾರಣೆಯನ್ನು ಸಂಕೇತಿಸುತ್ತದೆ.

ಉದಾ :—ಸುಡಂಗಾಡಿನೊಳು ಭಸ್ಮನೀಧರಿಸುತ್ತ (ಶ್ರೀಕೃಷ್ಣಪಾರಿಜಾತ)

**ಮನೆ : ಅರಮನೆ ಇತ್ಯಾದಿ :** ಎರಡೂ ಕೈಗಳ ಮೃಗಶೀರ್ಷ ಹಸ್ತಗಳನ್ನು ತಲೆಯ ಮೇಲೆ ಹಿಡಿದು ಅಭಿನಯಿಸಿದರೆ ಮನೆ ಎಂಬ ಸಂಕೇತವಾಗುತ್ತದೆ[21].

ಉದಾ :—ಮನೆ ಮನೆ ಭಿಕ್ಷವನು (ಶ್ರೀಕೃಷ್ಣ ಪಾರಿಜಾತ)

ಯಕ್ಷಗಾನ ವೇಷಧಾರಿಗಳಿಂದ **ಸರ್ಪಶಿರಹಸ್ತವು** ಈ ಕೆಳಗಿನ ವಸ್ತುಗಳನ್ನು ಅಭಿನಯಿಸುವುದಕ್ಕೆ ವಿನಿಯೋಗಿಸಲ್ಪಡುತ್ತದೆ.

**ಸರ್ಪ :** ಈ ಹಸ್ತವನ್ನು ಭುಜದ ಪಾರ್ಶ್ವಕ್ಕೆ ಹಿಡಿದು ಹೆಡೆಯಂತೆ ಚಲಿಸಿದರೆ ಸರ್ಪ ಮುಂತಾದವುಗಳನ್ನು ಅಭಿನಯದಿಂದ ಸಂಕೇತಿಸಿದಂತಾಗುತ್ತದೆ.

ಉದಾ :—ನಾಗವೇಣಿಯು ಕಂಡು ಸೈರಿಸದೆ (ಪಂಚವಟಿ ಸೀತಾಪಹಾರ)

**ಆನೆ :** ಈ ಹಸ್ತವು ಭಾ.ಚಿ. 17ರಲ್ಲಿ ಅಭಿನಯಿಸಿದಂತೆ ಅಭಿನಯಿಸಲ್ಪಟ್ಟರೆ, ಆನೆ ಎಂಬುದನ್ನು ಸಂಕೇತಿಸುತ್ತದೆ.

ಉದಾ :—ಮೀನಕೇತನ ಆನೆಯಂದದಿ ಮಾನಿನೀಮಣಿ ಬಂದಳು (ವಿರಾಟಪರ್ವ)

**ಮಲ್ಲರ ಶೌರ್ಯ ಪ್ರದರ್ಶನ :** ಈ ಹಸ್ತದಿಂದ ಭುಜದ ಮೇಲೆ ತಟ್ಟಿಕೊಂಡರೆ ಮಲ್ಲಯುದ್ಧ ಶೌರ್ಯ ಎಂದಾಗುತ್ತದೆ.

ಬಡಗುತಿಟ್ಟು ಮತ್ತು ಉ.ಕನ್ನಡ ಯಕ್ಷಗಾನ ವೇಷಧಾರಿಗಳು **ಸಿಂಹಮುಖ** ಹಸ್ತವನ್ನು ಈ ಕೆಳಗಿನ ಪ್ರಾಣಿ : ವಸ್ತುಗಳನ್ನು ಅಭಿನಯಿಸುವುದಕ್ಕೆ ವಿನಿಯೋಗಿಸುತ್ತಾರೆ.

**ಜಿಂಕೆ :** ಸಿಂಹಮುಖ ಹಸ್ತವು ಕಣ್ಣಿನ ಅಂಚಿನಲ್ಲಿ ನಿಲ್ಲಿಸಲ್ಪಟ್ಟು ಚಕಿತ

ವನ್ನು ಹೊಂದಿದ್ದರೆ ಜಿಂಕೆ ಎಂಬ ಸಂಜ್ಞೆಯಾಗುತ್ತದೆ. "ಕಣ್ಣಿನ ಚಕಿತತೆಯೊಂದಿಗೆ ಆದಕ್ಕೆ ಸಮವಾಗಿ ಹಸ್ತವೂ ಸಹ ಚಕಿತತೆಯನ್ನು ಹೊಂದಬೇಕು[22]. ಭಾ.ಚಿ. 18.

ಉದಾ :—ತನ್ನಂಗ ದಿ ನ್ನಂಗ ಧಿಕ್ಕಜತೋಯೆಂದು ಕುಣಿವ ಮೃಗವ.

ಆನೆ :—ಭಾ.ಚಿ. 19ರಲ್ಲಿ ತೋರಿಸಿದಂತೆ ಅಭಿನಯಿಸಿ ಅತ್ತಿಂದಿತ್ತ ಇತ್ತಿಂದತ್ತ ಚಲಿಸಿದರೆ ಆನೆಯೆಂಬ ಸಂಜ್ಞೆಯಾಗುವುದು. "ಈ ಹಸ್ತದಲ್ಲಿ ವಕ್ರವಾದ ಮಧ್ಯ ಬೆರಳು ಕೂಡಿರಬಾರದು"[23].

**ಸಾಧುಪ್ರಾಣಿಗಳು :** ಈ ಸಿಂಹಮುಖ ಹಸ್ತವನ್ನು ಮೇಲಿನಂತೆ ಅಭಿನಯಿಸಿ ಯಾವ ಚಲನೆಯನ್ನೂ ಮಾಡದಿದ್ದರೆ ಆಕಳು, ಅಶ್ವ ಮುಂತಾದ ಸಾಧುಪ್ರಾಣಿಗಳ ಸಂಕೇತವಾಗುತ್ತದೆ.

ಉದಾ :—ಆಕಳು ಕರುವನ್ನು ಹುಡುಕುವ ತೆರದಿ (ಸುಧನ್ವ ಕಾಳಗ ಸಭಾಹಿತಪ್ರತಿ)

**ಸಂಪತ್ತು :** ಈ ಹಸ್ತವನ್ನು ಭಾ.ಚಿ. 20ರಲ್ಲಿ ತೋರಿಸಿದಂತೆ ಅಭಿನಯಿಸಿದರೆ ಸಂಪತ್ತು ಎಂಬ ಸಂಕೇತವಾಗುತ್ತದೆ.

ಉದಾ :—ಕುರುರಾಯ ನೈಶ್ವರ್ಯವಡಗಿತೆ (ಕರ್ಣಪರ್ವ)

**ಅಲಪದ್ಮ** ಹಸ್ತವಿದನಿಯೋಗಗಳು ಯಕ್ಷಗಾನ ಕಲೆಯಲ್ಲಿ ಈ ರೀತಿಯಾಗಿ ಇರುವುದು.

**ಕಮಲ :** ಅಲಪದ್ಮ ಹಸ್ತವನ್ನು ಮುಖದ ಎದುರಿಗೆ ಭಾ.ಚಿ. 21ರಲ್ಲಿ ಅಭಿನಯಿಸಿದಂತೆ ಅಭಿನಯಿಸಿದರೆ ಕಮಲ ಎಂಬ ಸಂಜ್ಞೆಯಾಗುವುದು. ಇಂದು ಎಲ್ಲಾ ರೀತಿಯ ಹೂವುಗಳಿಗೂ ಈ ಹಸ್ತವನ್ನು ವಿನಿಯೋಗಿಸುತ್ತಾರೆ.

ಉದಾ ;—ವನರುಹಲೋಚನ ಲಾಲಿಸಿಂದಿರುಳಿನೊಳು ಕನಸಕಂಡೆನು ಮುದದಿ (ರತಿಜನ್ಮ)

**ಸ್ತನ :** ಈ ಹಸ್ತದ ಕೈಗಳನ್ನು ಎದೆಯ ಎದುರಿಗೆ ಹಿಡಿದು ಅರ್ಧಚಂದ್ರಾಕಾರದಲ್ಲಿ ಮಣಿಕಟ್ಟನ್ನು ತಿರುಗಿಸಿದರೆ ಸ್ತನ ಎಂಬ ಸಂಜ್ಞೆಯಾಗುವುದು.

ಉದಾ :—ನೆರೆಮನಸ್ಸನ್ನು ಮೇಲಿಟ್ಟು ಇಕ್ಕೊ ಗುರುಕುಚವರಚಣೀಮೆಟ್ಟು (ಪಂಚವಟಿ)

**ಆನೆ :** ಭಾ.ಚಿ. 22ರಲ್ಲಿ ತೋರಿಸಿದಂತೆ ಅಭಿನಯಿಸಿದರೆ ಆನೆ ಎಂಬ ಸಂಕೇತವಾಗುವುದು.

ಉದಾ :—ಆನೆ ಬಂತು ನೋಡುವ ಬನ್ನಿ.

ಚತುರ ಹಸ್ತದಿಂದ ಯಕ್ಷಗಾನ ವೇಷಧಾರಿಗಳು ಕುಂಕುಮ ಇಡುವಿಕೆಯನ್ನು ಅಭಿನಯಿಸುತ್ತಾರೆ.

**ಹಂಸಾಸ್ಯ–ಹಸ್ತ**ವನ್ನು ಇಂದಿನ ಯಕ್ಷಗಾನ ವೇಷಧಾರಿಗಳು ಯಥೇಚ್ಛವಾಗಿ ವಿನಿಯೋಗಿಸುತ್ತಿರುವುದರಿಂದ ಈ ಹಸ್ತವು ಇಂದು ಯಕ್ಷಗಾನದಲ್ಲಿ ಪ್ರಚಲಿತವಿರುವ ಹಸ್ತವಾಗಿದೆ.

**ವಿವಾಹ : ಮಾಲೆ :** ಹಂಸಾಸ್ಯ ಹಸ್ತವನ್ನು ಕೊರಳಿನ ಕೆಳಗಡೆಯಲ್ಲಿ ಮಾಲೆ ಯಂತೆ ತೋರಿಸಿದರೆ ಅದು ವಿವಾಹ : ಮಾಲೆ ಎಂಬ ಸಂಕೇತವಾಗುತ್ತದೆ. ಇದನ್ನು ಸಂಕೇತಿಸುವ ವಿಧಾನ ಯಕ್ಷಗಾನ ವೇಷಧಾರಿಗಳಲ್ಲಿ ವಿಧವಿಧವಾಗಿದ್ದು ಕೆಲವರು ಎರಡೂ ಕೈಗಳನ್ನು / ಒಂದೇ ಕೈಯನ್ನು ಬಳಸುತ್ತಾರೆ. ಕೊರಳಿನ ಸುತ್ತ ಚಲಿಸಿ ದಂತೆ ಕೆಲವರು ಅಭಿನಯಿಸಿದರೆ ಇನ್ನು ಕೆಲವರು ಮಾಲೆಯನ್ನು ಹಾಕಿದಂತೆ ಅಭಿ ನಯಿಸುತ್ತಾರೆ. ಭಾ.ಚಿ. 23.

ಉದಾ :—ಪದುಮನಯನೆ ಮದುವೆ ಬೇಡವೇನೆ ! ಬ್ರಹ್ಮಕಪಾಲ

**ಮನ್ಮಥ :** ಭಾಚಿ. 24ರಲ್ಲಿ ತೋರಿಸಿದಂತೆ ಅಭಿನಯಿಸಿ ತೋರಿಸಿದರೆ ಮನ್ಮಥ ಎಂಬ ಸಂಕೇತವಾಗುತ್ತದೆ.

ಉದಾ :—ಮಾರನರಗಿಣಿಯಂತೆ ತೋರುವಳು ಕಣ್ಗೆ (ವಿರಾಟಪರ್ವ)

**ಸೌಂದರ್ಯ :** ಈ ಹಸ್ತವನ್ನು ವಿಧವಿಧದಿಂದ ಅಭಿನಯಿಸುವದರೊಂದಿಗೆ ಯಕ್ಷ ಗಾನ ವೇಷಧಾರಿಗಳು ಸೌಂದರ್ಯದ ಸಂಕೇತವಾಗಿ ಬಳಸುತ್ತಾರೆ.

ಉದಾ :—ಸುರಸತಿಯರ ಸೊಬಗು ತಾನಾಚೆಯೊಳಿರಲಿ ಪ್ರಥ್ವಿಯೊಳಿನಿಥ ರೂಪಿಲ್ಲ.

**ಮುತ್ತು :** ಈ ಹಸ್ತವನ್ನು ಭಾಚಿ. 25ರಲ್ಲಿ ತೋರಿಸಿದಂತೆ ಅಭಿನಯಿಸುವದ ರೊಂದಿಗೆ ಯಕ್ಷಗಾನ ವೇಶಧಾರಿಗಳು ಮುತ್ತು, ಹವಳ, ವಜ್ರ, ಮುಂತಾದವುಗಳನ್ನು ಅಭಿನಯಿಸುತ್ತಾರೆ. ಇಂದು ವೇಷಧಾರಿಗಳು ಹಂಸಾಸ್ಯ ಹಸ್ತದ ಬದಲು ಕಟಕಾ ಮುಖ, ಸಿಂಹಮುಖ, ಹಸ್ತಗಳನ್ನು ವಿನಿಯೋಗಿಸುತ್ತಾರೆ.

ಉದಾ :—ಮಾನಿನಿ ಮಣಿಯೆ ಬಾರೆ (ಗಯಚರಿತ್ರೆ)

**ಸತಿ :** ಎರಡೂ ಕೈಗಳ ಹಂಸಾಸ್ಯ ಹಸ್ತವನ್ನು ಎದೆಯ ಎದುರಿಗೆ ಭಾಚಿ. 26 ರಲ್ಲಿ ತೋರಿಸಿದಂತೆ ಹಿಡಿದರೆ ಸತಿ ಎಂಬ ಸಂಕೇತವಾಗುವುದು [24].

ಉದಾ :—ಕಾಂತೆ ಸುಭದ್ರೆಯು (ಬಬ್ರುವಾಹನ)

**ಮಾತನಾಡುವುದು :** ತುಟಿಯ ಎದುರು ಈ ಹಸ್ತವನ್ನು ಹಿಡಿದರೆ ಮಾತ ನಾಡುವಿಕೆ ಎಂಬ ಸಂಕೇತವಾಗುವುದು.

ಉದಾ :—ಹೇಳಲಾರೆನೋ ರಂಗ (ಗಯಚರಿತ್ರೆ)

**ಹುಲಿ/ಕ್ರೂರಪ್ರಾಣಿಗಳು :** ಹುಲಿ ಮುಂತಾದ ಕ್ರೂರ ಪ್ರಾಣಿಗಳನ್ನು **ಊರ್ಣನಾಭ** ಹಸ್ತವನ್ನು ಎದೆಯ ಪಾರ್ಶ್ವದಲ್ಲಿ ನಿಲ್ಲಿಸಿ ಮುಖದಲ್ಲಿ ರೌದ್ರರಸವನ್ನು ಅಭಿನಯಿಸುವುದರೊಂದಿಗೆ ಸಂಕೇತಿಸುತ್ತಾರೆ. ಛಾಚಿ. 27 ಇಲ್ಲಿಯೂ ಸಹ ಒಂದು ಅಥವಾ ಎರಡು ಹಸ್ತಗಳನ್ನು ವಿನಿಯೋಗಿಸುವ ಸ್ವಾತಂತ್ರ್ಯವನ್ನು ವೇಷ ಧಾರಿಗೆ ಬಿಡಲಾಗಿದೆ.

ಉದಾ :— ಎಲವೋ ಭಿಮನೆ ನೀಕೇಳು ಆಕಳಿಗೆ ಹೆಬ್ಬುಲಿಯಂಜಲುಂಟೆ ಪೇಳು

(ಕರ್ಣಾರ್ಜುನ ಕಾಳಗೆ)

**ಪಂಚಮುದ್ರೆ :** **ಮುಕಳ** ಹಸ್ತವು ಯಕ್ಷಗಾನದಲ್ಲಿ ಹಿಂದೊಮ್ಮೆ ಇದ್ದು ಈಗ ಕಡಿಮೆಯಾಗಿದೆ. ಹಿಂದೆ ಯಕ್ಷಗಾನದ ಬಣ್ಣಗಾರಿಕೆಯಲ್ಲಿ ಕಣ್ಣಿನ ಪಾರ್ಶ್ವಕ್ಕೆ ಹಚ್ಚುವ ಪಂಚಮುದ್ರೆಯನ್ನು ಈ ಹಸ್ತದ ಬೆರಳುಗಳಿಂದಲೇ ಹಚ್ಚುತ್ತಿದ್ದರು. ಮಂಜುಳ ಎಂಬುದನ್ನು ಸಹ ಈ ಹಸ್ತದ ಮೂಲಕ ಸಂಕೇತಿಸಲ್ಪಡುತ್ತಿತ್ತು. [55]. ಇಂದು ಇವೆರಡೂ ಸಹ ಇಲ್ಲವಾಗಿವೆ.

**ದಾನಕೊಡುವುದು :** ಇಂದು ದಾನಕೊಡುವುದನ್ನು ಈ ಹಸ್ತದ ಮೂಲಕ ಅಭಿನಯಿಸುತ್ತಾರೆ.

ಉದಾ :—"ಕಾಸುಕನಕನ ಭೂಮಿಗೋವು ದಾನಗಳನಿನ್ನೇನಾದರೂ ಕೊಡಬಹುದು

(ಕರ್ಣಾರ್ಜುನ ಕಾಳಗ)

**ಗಿಳಿ : ಹಕ್ಕಿ : ಕರು :** ತಾಮ್ರಚೂಡ ಹಸ್ತದ ವಿನಿಯೋಗದಿಂದ ಈ ಮೇಲಿನ ವಸ್ತುಗಳನ್ನು ಛಾಚಿ. 28ರಲ್ಲಿ ತೋರಿಸಿದಂತೆ ಅಭಿನಯಿಸುತ್ತಾರೆ.

ಉದಾ :—ಕಾಮನ ಮುಂಗೈ ಅರಗಿಣಿಯಂತಿಹಳ [ಪಂಚವಟಿ ಸೀತಾಪಹಾರ]

**ಹಕ್ಕಿ**ಯನ್ನು ಗರುಡ ಹಸ್ತವನ್ನು ಛಾಚಿ. 29ರಲ್ಲಿ ತೋರಿಸಿದಂತೆ ತೋರಿಸಿ ಅಭಿನಯಿಸುವ ಪದ್ಧತಿಯು ಇತ್ತೆಂದು ನನ್ನ ಸಂಶೋಧನೆಯಿಂದ ಬೆಳಕಿಗೆ ಬಂದಿತು [26].

**ಬಾಣ :** ಯಕ್ಷಗಾನದಲ್ಲಿ ವೇಷಧಾರಿಗಳು ಬಾಣವನ್ನು **ಬಾಣ** ಹಸ್ತದಿಂದಲೇ ಅಭಿನಯಿಸಿ ತೋರಿಸುತ್ತಾರೆ. ಛಾಚಿ. 30. ಇಂದಿನ ಕಲಾವಿದರು ಇದನ್ನು ಚಂದ್ರ ಕಲಾ ಹಸ್ತದಿಂದ ಸೂಚಿಸುವುದನ್ನು ಕಾಣಬಹುದು.

ಉದಾ :—ಪಕ್ಕನೆಚ್ಚನಾತುರಕೆ ಸಿಕ್ಕಿದೆ ನಾನಾಶರಕ್ಕೆ [ವಿರಾಟಪರ್ವ]

**ನದಿ : ಸರೋವರ : ಮೆಚ್ಚು :** ಈ ವಸ್ತುಗಳನ್ನು **ಶಿಲೀಮುಖ** ಹಸ್ತದಿಂದ ಅಭಿನಯಿಸಿ ತೋರಿಸುವುದನ್ನು ಕಾಣಬಹುದು. ಛಾಚಿ. 31.

**ದೀಪ :** ತ್ರಿಲಿಂಗ ಹಸ್ತದಿಂದ ದೀಪವು ಯಕ್ಷಗಾನ ವೇಷಧಾರಿಗಳಿಂದ ಸಂಕೇತಿಸಲ್ಪಡುತ್ತದೆ. ಭಾಚಿ. 32,

**ಅಗ್ನಿ : ಭಯಂಕರ : ಮಳಿ :** ಸಂದಂಶ ಹಸ್ತವನ್ನು ಭಾಚಿ. 33ರಲ್ಲಿ ತೋರಿಸಿದಂತೆ ಅಭಿನಯಿಸಿ ಹಸ್ತವನ್ನು ಅಲುಗಿಸಿ ಮುಖದಲ್ಲಿ ರೌದ್ರಭಾವವನ್ನು ವ್ಯಕ್ತಪಡಿಸಿದರೆ ಅಗ್ನಿ, ಭಯಂಕರ ಎಂಬುದು ಅಭಿನಯಿಸಲ್ಪಟ್ಟಂತಾಗುವುದು. ಮುಖದಲ್ಲಿ ರೌದ್ರಭಾವ ಇಲ್ಲದಿದ್ದರೆ ಮಳೆ ಎಂಬುದನ್ನು ತೋರಿಸಿದಂತಾಗುವುದು.

**ಚಕ್ರ : ಚಕ್ರ ಮುದ್ರೆಯ** ಮೂಲಕ ಯಕ್ಷಗಾನ ವೇಷಧಾರಿಗಳು ಚಕ್ರವನ್ನು ಸಂಕೇತಿಸುತ್ತಾರೆ. ಭಾಚಿ. 34.

ಉದಾ :—ಎನ್ನೆಯ ಕಂಠವನರಿಯಲು ಚಕ್ರವ ಚಿನ್ಮಯ ಕೈಯಲಿಪಿಡಿದಿಹೆಯ
[ಭೀಷ್ಮಪರ್ವ]

**ಕಪಟ :** ಚಕ್ರವನ್ನು ಅಭಿನಯಿಸಿದಂತೆ ಅಭಿನಯಿಸಿ ಹಸ್ತಗಳನ್ನು ಅರ್ಧ ವೃತ್ತಾಕಾರದಲ್ಲಿ ತಿರುಗಿಸಿದರೆ ಕಪಟ ಎಂಬ ಸಂಜ್ಞೆಯಾಗುವುದು. ಭಾಚಿ. 35.

ಉದಾ :—ಕಪಟದಿ ದ್ಯೂತವನಾಡಿ [ಗದಾಪರ್ವ]

**ಗರುಡ : ಗರುಡ** ಪಕ್ಷಿಯನ್ನು ಗರುಡ ಹಸ್ತದಿಂದ ಅಭಿನಯಿಸಿ ತೋರಿಸುತ್ತಿದ್ದರು. ಭಾಚಿ. 36. ಇಂದು ಅನೇಕ ಕಲಾವಿದರು ಪತಾಕಾ ಹಸ್ತವನ್ನು ಮೇಲೆ ಕೆಳಗೆ ಮಾಡುವುದರ ಮೂಲಕ ಗರುಡನನ್ನು ಸಂಕೇತಿಸುತ್ತಾರೆ. ಕರ್ಕಿ ಪರಮಯ್ಯ ಹಾಸ್ಯಗಾರ ಕುಟುಂಬದವರು ಹಾಗೂ ಅವರ ಶಿಷ್ಯರು ತಾರ್ಕ್ಷ್ಯ ಮುದ್ರೆಯಿಂದ ಗರುಡನನ್ನು ಸಂಕೇತಿಸುತ್ತಾರೆ. ಭಾಚಿ. 37.

ಉದಾ :—ಉರಗಶಯನಾ ದೇವಗರುಡವಾಹನಾ [ಸಭಾ ಲಕ್ಷಣ]

**ಶಂಖ :** ಯಕ್ಷಗಾನ ವೇಷಧಾರಿಗಳು **ಶಂಖಮುದ್ರೆಯಿಂದ** ಶಂಖವನ್ನು ಸಂಕೇತಿಸುತ್ತಾರೆ. ಭಾಚಿ. 38.

ಉದಾ :—ಕಂಬುಕಂಠಿಣಿ ಚಾರು ಶೀಲೆ [ಪಟ್ಟಾಭಿಷೇಕ]

**ಕರ್ಕಟ** ಹಸ್ತವನ್ನು, ಭಾಚಿ. 39 ರಲ್ಲಿ ತೋರಿಸಿದಂತೆ ಅಭಿನಯಿಸುವಿಕೆಯಿಂದಲೂ ಶಂಖ ಊದುವುದನ್ನು ಅಭಿನಯಿಸಿ ತೋರಿಸುತ್ತಾರೆ.

**ಲಜ್ಜೆ : ಮದನವಿಕಾರ ;** ಕರ್ಕಟ ಹಸ್ತದಿಂದ ಅಭಿನಯಿಸುವುದರೊಂದಿಗೆ ಲಜ್ಜೆ ಅಥವಾ ಮದನ ಬಾಧೆಯನ್ನು ಅಭಿವ್ಯಕ್ತಿಗೊಳಿಸುತ್ತಾರೆ.

ಉದಾ :—ದನುಜೇಂದ್ರನ ಕಾಣಿತಸ್ಮರಹತಿಯೊಳು ಬಳಲಿ [ಭೀಷ್ಮ ವಿಜಯ]

**ವೈರತ್ವ :** ಪಾಶಹಸ್ತವನ್ನು ವೈರ, ಕಲಹ, ಯುದ್ಧ ಮುಂತಾದವುಗಳನ್ನು ತೋರಿಸಲು ವಿನಿಯೋಗಿಸುತ್ತಾರೆ.
ಉದಾ ;--ಇಂದಿರೇಶನೆ ನಾನು ಇವರ ಜಗಳವನು ನಿಂದು ವೀಕ್ಷಿಸಲಾರೆ.

**ದೇವತೆಗಳು :** ಯಕ್ಷಗಾನದ ಹಸ್ತಾಭಿನಯದಲ್ಲಿ ದೇವತೆಗಳನ್ನು ಸಂಕೇತಿಸುವ ಹಸ್ತಗಳು ವಿರಳವಾಗಿವೆ. ಹಾಗಿದ್ದರೂ ಸಹ ಯಕ್ಷಗಾನ ವೇಷಧಾರಿಗಳು ಶಿವನನ್ನು **ಶಿವಲಿಂಗ ಹಸ್ತದಿಂಡ** ತೋರಿಸುತ್ತಾರೆ.

**ವಿಷ್ಣು ;** ಅರ್ಧ ಪತಾರ ಹಸ್ತವನ್ನು ಸ್ವಸ್ತಿಕಾಕಾರದಲ್ಲಿ ಹಿಡಿಯುವುದರ ಮೂಲಕ ವಿಷ್ಣುವನ್ನು ಸಂಕೇತಿಸುತ್ತಾರೆ. ಭಾಚಿ. 40 ವಿಷ್ಣುವನ್ನು ಸಂಕೇತಿಸುವ ಈ ಅಭಿನಯದಲ್ಲಿ ವಿಭಿನ್ನತೆ ಹಾಗೂ ವಿಭಿನ್ನ ಅಭಿಪ್ರಾಯಗಳನ್ನು ಯಕ್ಷಗಾನ ವೇಷಧಾರಿಗಳು ಕೊಡುತ್ತಾರೆ. ಇದರಲ್ಲಿ ತೋರಿಸಿದಂತೆ ಅಭಿನಯಿಸಿದರೆ ಎದೆಯ ಸೌಂದರ್ಯ ಹಾಗೂ ಆಭರಣಗಳ ಸೌಂದರ್ಯ ಕಾಣದಿರುವುದರಿಂದ ಹಾಗೆ ಅಭಿನಯಿಸುವುದಕ್ಕಿಂತ ಕೈಗಳನ್ನು ನೇರವಾಗಿ ಎತ್ತಿ ಅಭಿನಯಿಸುವುದು ಉತ್ತಮ [27]. ಸ್ತ್ರೀ ವೇಷವು ಈ ಮೇಲಿನ ಎರಡರಂತೆ ಅಭಿನಯಿಸದೆ ಭಾಚಿ. 41ರಲ್ಲಿ ತೋರಿಸಿದಂತೆ ಅಭಿನಯಿಸ ಬೇಕು.[28] ಈ ಅಭಿನಯವು ದೇವತೆಗಳ ಚತುರ್ಭುಜಗಳ ಸಂಕೇತವಾಗಿರುವುದು; ಎಂಬುದು ಮೂರೂರು ಕೃಷ್ಣ ಹೆಗಡೆಯವರ ಅಭಿಪ್ರಾಯ.

**ದಶಾವತಾರ ಹಸ್ತಗಳು :** ಯಕ್ಷಗಾನದ ಕಥಾಭಾಗ ಆರಂಭವಾಗುವ ಮೊದಲಿನ ವಿಧಿ ಸಭಾಲಕ್ಷಣದಲ್ಲಿ ಭಾಗವತರು ಹಾಡುವ [ಸಂಗೀತಕಾರ]
ಮತ್ಸ್ಯಕೂರ್ಮ ವರಾಹಶ್ಚ ನಾರಸಿಂಹಶ್ಚವಾಮನ ;
ಭಾರ್ಗವೋ ರಾಮಕೃಷ್ಣಾ ಚ ಬುದ್ಧ: ಕಲ್ಕೀಚತೇದಶಃ–ಎಂಬ ಶ್ಲೋಕಕ್ಕೆ ವಿಷ್ಣುವಿನ ದಶಾವತಾರವನ್ನು ಈ ಕೆಳಗಿನ ಮುದ್ರೆಗಳಿಂದ ಅಭಿನಯಿಸಿ ತೋರಿಸುತ್ತಾರೆ.

**ಮತ್ಸ್ಯಾವತಾರ :** ಮತ್ಸ್ಯಾವತಾರವನ್ನು **ಮತ್ಸ್ಯ** ಅಥವಾ **ಮಕರ** [29] ಹಸ್ತದಿಂದ ಭಾಚಿ. 42 ರಲ್ಲಿ ತೋರಿಸಿದಂತೆ ಅಭಿನಯಿಸಿ ತೋರಿಸುತ್ತಾರೆ.

**ಕೂರ್ಮಾವತಾರ :** ಭಾಚಿ 43ರಲ್ಲಿ ತೋರಿಸಿದಂತೆ **ಕೂರ್ಮಹಸ್ತದಿಂದ** ಕೂರ್ಮಾವತಾರವನ್ನು ಅಭಿನಯಿಸುತ್ತಾರೆ.

**ವರಾಹ ಅವತಾರ ;** **ವರಾಹ** ಹಸ್ತದಿಂದ ವರಾಹಾವತಾರವನ್ನು ಭಾಚಿ. 44ರಲ್ಲಿ ತೋರಿಸಿದಂತೆ ಅಭಿನಯಿಸುತ್ತಾರೆ.

**ನರಸಿಂಹಾವತಾರ :** **ಊರ್ಣನಾಭಹಸ್ತ**ವನ್ನು ರೌದ್ರಮುಖಭಾವದಿಂದ ಹೊರಗೆ ತೆಗೆದ ನಾಲಿಗೆಯಿಂದ ಭಾಚಿ. 45 ರಲ್ಲಿ ತೋರಿಸಿದಂತೆ ಅಭಿನಯಿಸುತ್ತಾರೆ. ಇಲ್ಲಿಯೂ ಏಕಹಸ್ತ, ದ್ವಿಹಸ್ತಗಳ ವಿನಿಯೋಗಗಳು ಕಂಡುಬರುತ್ತವೆ.

ವಾಮನಾವತಾರ : ಮೃಗಶಿರ ಹಸ್ತವನ್ನು ತೋರಿಸಿ ದೇಹವನ್ನು ಬಗ್ಗಿಸಿ ಅಭಿನಯಿಸುವುದರ ಮೂಲಕ ವಾಮನಾವತಾರವನ್ನು ಅಭಿನಯಿಸುತ್ತಾರೆ. ಛಾಚಿ. 46.

ಪರಶುರಾಮಾವತಾರ ; ಛಾಚಿ. 47ರಲ್ಲಿ ತೋರಿಸಿದಂತೆ ಪತಾಕ ಹಸ್ತವನ್ನು ಅಭಿನಯಿಸಿ ಪರಶುರಾಮಾವತಾರವನ್ನು ತೋರಿಸುತ್ತಾರೆ.

ರಾಮಾವತಾರ ; ಶಿಖರಹಸ್ತವನ್ನು ಎದೆಯ ಪಾರ್ಶ್ವಕ್ಕೆ ಹಿಡಿದು ಅಭಿನಯಿಸಿದರೆ ರಾಮಾವತಾರವನ್ನು ಸೂಚಿಸುತ್ತದೆ.

ಕೃಷ್ಣಾವತಾರ ; ಎರಡೂ ಕೈಗಳ ಮೃಗಶೀರ್ಷ ಹಸ್ತವನ್ನು ಛಾಚಿ. 48 ರಲ್ಲಿ ತೋರಿಸಿದಂತೆ ಅಭಿನಯಿಸಿದರೆ ಕೃಷ್ಣಾವತಾರವಾಗುತ್ತದೆ.

ನನಗೆ ಬುದ್ಧ ಮತ್ತು ಕಲ್ಕಿ ಅವತಾರಗಳ ಹಸ್ತಾಭಿನಯವು ಯಾವ ವೇಷಧಾರಿಗಳಿಂದಲೂ ತಿಳಿದು ಬರಲಿಲ್ಲ. ಇಂದಿನ ವೇಷಧಾರಿಗಳು ಹಂಸಾಸ್ಯ ಅಥವಾ ಪತಾಕ ಹಸ್ತಗಳನ್ನು ವಿನಿಯೋಗಿಸಿ ಈ ಎರಡು ಅವತಾರಗಳನ್ನು ತೋರಿಸುವುದು ಕಂಡು ಬರುತ್ತವೆ.

ಹೀಗೆ ಯಕ್ಷಗಾನದಲ್ಲಿ ಹಸ್ತಾಭಿನಯವು ಉಳಿದ ಕಲೆಗಳಲ್ಲಿದ್ದಷ್ಟು ಸಂಕೀರ್ಣವಾಗಿರದೇ ಸೌಂದರ್ಯಕ್ಕೆ ಕಲಾಪೋಷಣೆಗೆ ಸಾಕಷ್ಟು ಸಮೃದ್ಧವಾಗಿ ಬೆಳೆದಿತ್ತು. "ಕಾಲಕ್ರಮೇಣ ಜಗತಃಪರಿವರ್ತಮಾನಾ ಚಕ್ರಾರಪಂಕ್ತಿಃ ರಿವ ಗಚ್ಛತಿ ಭಾಗ್ಯಪಂಕ್ತಿ. ಎಂಬಂತೆ ಮಾತುಗಾರಿಕೆಯೇ ಪ್ರಧಾನ ಪಾತ್ರವಹಿಸಿ ಅಭಿನಯಕ್ಕೆ ಚ್ಯುತಿ ಪ್ರಾರಂಭವಾಯಿತು. ಯಾವುದೇ ರೀತಿಯ ಕಲಿಕೆ, ತರಬೇತಿ, ಮಾರ್ಗದರ್ಶನ ಇಲ್ಲದೆ ಯಕ್ಷಗಾನ ರಂಗಕ್ಕೆ ಕೇವಲ ಮಾತಿನ ಭಂಡವಾಳದೊಂದಿಗೆ ಪ್ರವೇಶಿಸಿದ ವೇಷಧಾರಿಗಳು ಬಣ್ಣಹಚ್ಚಿ ನಿಂತು ಮಾಡುವ ತಾಳಮದ್ದಳೆಯೇ ಯಕ್ಷಗಾನ ಎಂಬುದನ್ನು ತೋರಿಸುವಷ್ಟರವಟ್ಟಿಗೆ ನೃತ್ಯ, ನಾಟ್ಯ, ಭಾವ, ರಸ ಅಭಿನಯಗಳನ್ನು ದೂರೀಕರಿಸಿದರು. ಹಿರಿಯ ಕಲಾವಿದರ ಮಾರ್ಗದರ್ಶನವಿದ್ದ ಕೆಲವು ಕಲಾವಿದರಲ್ಲಿ ಅಲ್ಲಲ್ಲಿ ಆಗಾಗ ಕೆಲವು ಪದಗಳಿಗೆ ಇವುಗಳನ್ನು ಕಾಣಬಹುದು.

# ಅಡಿ ಟಿಪ್ಪಣಿಗಳು

1. ಯಕ್ಷಗಾನ ವೇಷಧಾರಿಗಳು ಈ ಹಸ್ತಗಳನ್ನು ರಸಿಕಜನಮನೋಲ್ಲಾಸಿನಿ ಸಾರ ಸಂಗ್ರಹ ಭರತಶಾಸ್ತ್ರ, ಅಭಿನಯ ದರ್ಪಣ, ನಾಟ್ಯಶಾಸ್ತ್ರಗಳಲ್ಲಿ ಇದ್ದಂತೆ ಸ್ವಲ್ಪ ವ್ಯತ್ಯಾಸ ಮಾಡಿ ವಿನಿಯೋಗಿಸುತ್ತಾರೆ.
2. ಯಕ್ಷಗಾನದಲ್ಲಿ ಈ ಹಸ್ತದ ಉಪಯೋಗವು ಬಹಳವಾಗಿರುತ್ತದೆ.
3. ತೆಂಕು ತಿಟ್ಟಿನ ಕೆಲವು ವೇಷಧಾರಿಗಳು ಅಶ್ವವನ್ನು ತೋರಿಸುವ, ಈ ಪದ್ಧತಿಯು ಕಥಕ್ಕಳಿಯಿಂದ ಬಂದಿರುವದೆಂಬ ಅಭಿಪ್ರಾಯವನ್ನು ಕೊಡುತ್ತಾರೆ. ಅವರು ತ್ರಿಪತಾಕ ಹಸ್ತವನ್ನು ಅಶ್ವ ಎಂಬುದಕ್ಕೆ ಅಭಿನಯಿಸುತ್ತಾರೆ. ಕಥಕ್ಕಳಿಯ ಪ್ರಭಾವವಿರುವ ತೆಂಕಿನ ಕಲಾವಿದರಲ್ಲಿ ಈ ಅಭಿನಯ ವಿದೆಯೇ ಹೊರತು ಬಡಗಿನ ಕಲಾವಿದರಲ್ಲಿ ಕಂಡುಬರುವುದಿಲ್ಲ. ತ್ರಿಪತಾಕ ಹಸ್ತವು ಯಕ್ಷಗಾನದಲ್ಲಿ ಅದೂ ವಿಶೇಷತಃ ಉ.ಕ. ಕುಂದಾಪುರ ತಿಟ್ಟಿನಲ್ಲಿ ಇಲ್ಲ.
4. ಹಸ್ತಗಳನ್ನು ಭೂಮಿಗೆ ಸಮಾನಾಂತರವಾಗಿ ಹಿಡಿಯುವ ಪದ್ಧತಿಯೂ ಇದೆ. ಕುಮಟಾ ಗೋವಿಂದ ನಾಯ್ಕ.
5. ಈ ಅಭಿಪ್ರಾಯವನ್ನು ತಿಳಿಸಿದವರು ಮೂರೂರು ಕೃಷ್ಣ ಹೆಗಡೆ. ಮಲ್ಲಗದ್ದೆ ಗಣೇಶ ಹೆಗಡೆ, ಜಿ. ಪಿ. ಹಾಸ್ಯಗಾರ. ಇದೇ ನಿಯಮವು ವಿಷ್ಣುವನು ತೋರಿಸುವಾಗಲೂ ಇದ್ದದ್ದನ್ನು ಕಾಣಬಹು
6. ಹೊಸ್ತೋಟ ಮಂಜುನಾಥ ಭಾಗವತ.
7. ದಂಪತಿಗಳಲ್ಲದವರು ಸ್ತ್ರೀಪುರುಷರ ಹಸ್ತದ ಮೇಲೆ ಹಸ್ತವನ್ನಿಟ್ಟು ವಚನ ಕೊಡುವುದು ಸಾಧುವಲ್ಲ. ಅಂತಹ ಸಂದರ್ಭದಲ್ಲಿ ಅವರವರ ಕೈಯಮೇಲೆ ಕೈಯನ್ನಿಟ್ಟು ಅಭಿನಯಿಸಬೇಕು—ಕರ್ಗಲ್ಲು ಸುಬ್ಬಣ್ಣ ಭಟ್.
8. ತೆಂಕಿನ ಕೆಲವು ವೇಷಧಾರಿಗಳು ಪತಾಕ ಹಸ್ತದ ಬದಲು ತ್ರಿಪತಾಕ ಹಸ್ತವನ್ನು ತೋರಿಸುತ್ತಾರೆ. ಇದು ಕಥಕ್ಕಳಿಯ ಪ್ರಭಾವವಾಗಿರುವುದು.— ವಿಟ್ಲ ರಾಮಯ್ಯ ಶೆಟ್ಟಿ.
9. ಸೂಚಿ ಹಸ್ತದ ಬದಲು ಅಲಪದ್ಮ ಹಸ್ತವನ್ನು, ಪತಾಕಹಸ್ತವನ್ನೂ ಸಹ ವಿನಿಯೋಗಿಸುತ್ತಾರೆ. ಶಿಖರ ಹಸ್ತದ ಪ್ರಯೋಗವೂ ಇರುವುದು.
10. ಯಕ್ಷಗಾನದಲ್ಲಿ ತ್ರಿಪತಾಕ ಹಸ್ತವು ಇಲ್ಲದಿದ್ದು ಅದರ ವಿನಿಯೋಗಗಳೆಲ್ಲವೂ ಅರ್ಧಪತಾಕ ಹಸ್ತದಿಂದಲೇ ತೋರಿಸಲ್ಪಡುತ್ತದೆ. ಕೆಲವು ಕಲಾವಿದರು ತ್ರಿಪತಾಕ ಹಸ್ತವನ್ನು ವಿನಿಯೋಗಿಸಿದ್ದನ್ನು ಲೇಖಕ ಕಂಡಿದ್ದಾನೆ.
11. ಈ ಹಸ್ತವನ್ನು ಕಮಲದಂತಿರುವ ಕಣ್ಣು ಅಥವಾ ವಿಶಾಲವಾದ ಕಣ್ಣು ಎಂಬುದಕ್ಕೆ ಮಾತ್ರ ವಿನಿಯೋಗಿಸಬೇಕು. ಉಳಿದ ಸಂದರ್ಭಗಳಲ್ಲಿ ಚತುರ ಹಸ್ತವನ್ನು ಉಪಯೋಗಿಸಬೇಕು ಎಂದು ಅಭಿಪ್ರಾಯಪಟ್ಟವರು 'ಯಕ್ಷಗಾನ

ಕನ್ಯೆ' ಎಂಬ ಪ್ರಶಂಸೆಗೆ ಪಾತ್ರರಾದ ಶ್ರೀ ಮೂರೂರು ಕೃಷ್ಣ ಹೆಗಡೆ ಇವರು ಒಂದೇ ವಸ್ತುವಿನ ಸಂಕೇತಕ್ಕೆ ಬೇರೆ ಬೇರೆ ಹಸ್ತಗಳನ್ನು ವಿನಿಯೋಗಿಸಿ ತೋರಿಸಿದ್ದಾರೆ. ಅರ್ಧಪತಾಕ ಮತ್ತು ಚತುರ ಹಸ್ತ ಕಣ್ಣನ್ನು ತೋರಿಸಲು, ಅರ್ಧಪತಾಕ ಕೀಲಕ ಗೆಳೆತನಕ್ಕೆ ಅರ್ಧಪತಾಕ ಹಂಸಾಸ್ಯ ವಿವಾಹಕ್ಕೆ, ಪತಾಕಸಿಂಹಮುಖ ಅಶ್ವವನ್ನು ತೋರಿಸಲ.

12. ಈ ಹಸ್ತವು ಒಡಿಸ್ಸಿ ನೃತ್ಯದಲ್ಲಿದ್ದು, ಅದಕ್ಕೆ ನೃತ್ಯರತ್ನಾವಲಿ ಗ್ರಂಥವು ಆಧಾರವಾಗಿದ್ದು ಈ ಗ್ರಂಥವು ಈ ಹಸ್ತವನ್ನು ಧನು ಹಸ್ತವೆಂದೇ ಹೆಸರಿಸಿದೆ.
13. ಇಂದು ಕಿರುಬೆರಳನ್ನು ವಿಸ್ತರಿಸಿದ ಶಿಖರ ಹಸ್ತವನ್ನೇ ವಿನಿಯೋಗಿಸುತ್ತಾರೆ.
14. 5 ಮತ್ತು 6 ನವೆಂಬರ್ 1988ರಲ್ಲಿ ಇಡುಗುಂಜಿಯಲ್ಲಿ ನಡೆದ ಗೋಷ್ಠಿಯಲ್ಲಿ ಕರ್ಕಿ ಹಾಸ್ಯಗಾರರ ಅನುಭವ.
15. ಜಯಂತಿ.
16. ಶ್ರೀ ವರದರಾಜ ಪೈ, ಭಟ್ಕಳ,
17. ಶ್ರೀ ವಿ. ಟಿ. ಶೀಗೆಹಳ್ಳಿ.
18. ಈ ತಂತ್ರವನ್ನು ಮೃಗಶೀರ್ಷ ಹಸ್ತದಿಂದ ಸ್ತ್ರೀಪುರುಷ ಅಭಿನಯದಲ್ಲಿಯೂ ಕಾಣಬಹುದು.
19. ಅಭಿಪ್ರಾಯ—ಪಿ. ವಿ. ಹಾಸ್ಯಗಾರ.
20. ಅಭಿಪ್ರಾಯ—ತಿಮ್ಮಣ್ಣ ಗಾಂವಕರ್
21. ಈಗಿನ ಕಲಾವಿದರನೇಕರು ಹೆಬ್ಬೆರಳು ಹಾಗೂ ಕಿರುಬೆರಳನ್ನು ವಿಸ್ತಜಿಸದೇ ಮೃಗಶೀರ್ಷ ಹಸ್ತವನ್ನು ಅಭಿನಯಿಸುತ್ತಾರೆ.
22. ಅಭಿಪ್ರಾಯ ಮೂರೂರು ದೇವರು ಹೆಗಡೆ.
23. ನಾರಾಯಣ ಹಾಸ್ಯಗಾರ ಕರ್ಕಿ.
24. ಅಭಿಪ್ರಾಯ ಕರ್ಗಲ್ಲು ಸುಬ್ಬಣ್ಣಭಟ್, ಜಿ. ಪಿ. ಹಾಸ್ಯಗಾರ.
25. ಅಭಿಪ್ರಾಯ ಮೂರೂರು ಕೃಷ್ಣ ಹೆಗಡೆ.
26. ಅಭಿಪ್ರಾಯ ಶ್ರೀಮತಿ ಗೌರಮ್ಮ ಗಾಂವಕರ್. ಇವಳು ತಂದೆಯಾದ ತಿಮ್ಮಣ್ಣ ಗಾಂವಕರಲ್ಲಿ ಅಭಿನಯವನ್ನು ಕಲಿತು ಹೈದ್ರಾಬಾದದ ದೂರದರ್ಶನದಲ್ಲಿ ಯಕ್ಷಗಾನವನ್ನು ಪ್ರದರ್ಶಿಸಿದ ಮಹಿಳೆ.
27. ಅಭಿಪ್ರಾಯ ಹೊಸ್ತೋಟ ಮಂಜುನಾಥ ಭಾಗ್ವತ, ಮಹಾಬಲ ಹೆಗಡೆ, ಕೆರೆಮನೆ
28. ವಿ. ಟಿ. ಹೆಗಡೆ, ಶೀಗೆ ಹಳ್ಳಿ.
29. ನಾಟ್ಯ ಶಾಸ್ತ್ರವು ಮಕರ ಹಸ್ತ ಎಂದು ಹೇಳಿದೆ. ಅಭಿನಯದರ್ಪಣ, ಭರತ ಶಾಸ್ತ್ರ ಗ್ರಂಥಗಳು ಮತ್ಸ್ಯ ಹಸ್ತವೆಂದು ಹೇಳಿದೆ. ಇವೆರಡೂ ಹಸ್ತಗಳು ಯಕ್ಷಗಾನ ಪರಂಪರೆಯಲ್ಲಿವೆ.

## ಪರಿಶಿಷ್ಟ

# ಪಾಶ್ಚಾತ್ಯ-ಔತ್ತರೇಯ ಮತ್ತು ದಾಕ್ಷಿಣಾತ್ಯ ವಿಮರ್ಶಕರ ಕಲಾವಿದರ ಅಭಿಪ್ರಾಯಗಳು

ಯಕ್ಷಗಾನದಲ್ಲಿಯ ಹಸ್ತಾಭಿನಯದ ಕುರಿತು ಔತ್ತರೇಯ ದಾಕ್ಷಿಣಾತ್ಯ ಪಶ್ಚಾತ್ಯ ವಿಮರ್ಶಕರು ಮತ್ತು ವೃತ್ತಿನಿವೃತ್ತಿ, ವೃತ್ತಿಪ್ರವೃತ್ತ ವೇಷಧಾರಿಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಿರುತ್ತಾರೆ. ಪ್ರಸ್ತುತ ಇಲ್ಲಿ ವಿಮರ್ಶಕರ ಅಭಿಪ್ರಾಯಗಳು ಲಿಖಿತ ರೂಪದಲ್ಲಿದ್ದು, ವೇಷಧಾರಿಗಳಅಭಿಪ್ರಾಯಗಳು ನನ್ನ ಪ್ರಶ್ನಾವಳಿಗೆ ಉತ್ತರಿಸಿದ ಹಸ್ತಪ್ರತಿ ಹಾಗೂ ಧ್ವನಿಸುರುಳಿಯಲ್ಲಿಯದಾಗಿರುತ್ತದೆ.

### ಡಾ|| ವಿ. ರಾಘವನ್

"ಪ್ರಾರಂಭದಲ್ಲಿ ಯಕ್ಷಗಾನವು ಅಭಿನಯದ ವಿಷಯದಲ್ಲಿ ಭರತಶಾಸ್ತ್ರವನ್ನೇ ಪೂರ್ಣವಾಗಿ ಅನುಸರಿಸುತ್ತಿರಬೇಕು. ತಮಿಳಿನ ತೆರಕ್ಕೂತ್ತುಗಳಲ್ಲಿ ಮೊನ್ನೆ ಮೊನ್ನೆಯವರೆಗೂ ಇದ್ದ 'ಅಭಿನಯವು' ಎಂದರೆ 'ನೃತ್ಯವು' ಯಕ್ಷಗಾನದಲ್ಲಿ ವಿಶೇಷವಾಗಿ ಇದ್ದಿರಬೇಕು. ಮಲಬಾರದ 'ಕಥಾಕೇಲಿ'ಯಲ್ಲಿ ಇಂಥ ಅಭಿನಯವಿಲ್ಲ. ತಮಿಳಿನ ಬಯಲಾಟಗಳಲ್ಲಿ, ಚರಿತ್ರೆಯಲ್ಲಿ ಪದ–ಸಂಗೀತಗಳಲ್ಲೇ ಇರುತ್ತದೆ. ನಡುನಡುವೆ ಪ್ರೇಕ್ಷಕರಿಗೆ ಕಥಾಸಂದರ್ಭವನ್ನು ತಿಳಿಸಲು'ಕಥಿಯಕ್ಕಾರನ್'(ಭಾಗವತ)ನು ಗದ್ಯದಲ್ಲಿ ಮಾತನಾಡುವುದುಂಟು. ಇತ್ತೀಚೆಗೆ ಯಕ್ಷಗಾನವು ಗದ್ಯವನ್ನು ಹೆಚ್ಚಾಗಿ ಸೇರಿಸ ಹತ್ತಿ ಆಧುನಿಕ ನಾಟಕದ ರೂಪವನ್ನು ಹೊಂದುತ್ತಿದೆ. ಪಾತ್ರದವರು ವಚನವನ್ನು ಆಡಿ ಮುಗಿಸಿದ ಕೂಡಲೇ ಮುಂದಿನ ವಿಷಯವನ್ನು ಭಾಗವತನು ಹಾಡುವನು. ಆಗ ಅವರ ಪ್ರತಿಯೊಂದು ಪದದ ಅರ್ಥವನ್ನು ಹೊರಡಿಸುವಂತೆ ಪಾತ್ರದವರು ಸಾಭಿನಯ-ನೃತ್ಯವನ್ನು ಮಾಡುವ ಪೂರ್ವಪದ್ಧತಿ ಇದ್ದಂತೆತೋರುತ್ತದೆ. ಅದನ್ನು ನಾಚಿನಲ್ಲಿಯೂ ಕಥಾಕೇಲಿಯಲ್ಲೂ ಈಗಲೂ ಕಾಣುತ್ತೇವೆ. ಭೀಷ್ಮವಿಜಯದಲ್ಲಿ ಸಾಲ್ವರಾಜನು ಸ್ನಾನ, ಭಸ್ಮಧಾರಣ, ಶಿವಲಿಂಗ ಪೂಜೆ, ಮುಂತಾದವುವೆಲ್ಲವನ್ನೂ ಅಭಿನಯದಲ್ಲೇ ಮಾಡಿದನು. ಅದರಂತೆ ಅಂಬಾ, ಅಂಬಿಕಾ, ಅಂಬಾಲಿಕೆಯರೆಂಬ ರಾಜಕನ್ನೆಯರು ಗಂಗಾಸ್ನಾನವನ್ನು ಅಭಿನಯಿಸಿದರು. ಮಾತಿಲ್ಲದ ಶುದ್ಧ ಅಭಿನಯವಿರುವ ಎರಡು ಸಂದರ್ಭಗಳಿವು. ಯಕ್ಷಗಾನವು ಸಮೃದ್ಧ ಹಸ್ತಾಭಿನಯವುಳ್ಳ ಮೂಕ ಪ್ರದರ್ಶನವಾದ ಕಥಾಕೇಲಿಯಲ್ಲವಾದರೂ ಇದರಲ್ಲಿಯ ಅಭಿನಯವು ತಕ್ಕ ಮಟ್ಟಿಗೆ ಎಷ್ಟೋ ಪಾತ್ರಗಳು ಮಾತಿನ ನಡುನಡುವೆ ತಮ್ಮ ಭಾವನನ್ನು ವ್ಯಕ್ತಪಡಿಸುವುದಕ್ಕೆ ತಕ್ಕ ಹಸ್ತ

ಗಳನ್ನು ಅಥವಾ ಮುದ್ರೆಗಳನ್ನು ಉಪಯೋಗಿಸುತ್ತವೆ. ಶಿಖರ ಮುದ್ರೆಯು ಶೂರ, ಪ್ರೇಮ, ಪ್ರಭುವನ್ನು ತೋರಿಸುತ್ತದೆ. ಕಥಾಕೇಲಿಯೊಳಗಿನ 'ಶಿಖರವು' ಈ ಮಟ್ಟಿಗೆ ಸಮರ್ಪಕವಾಗಿಲ್ಲ. ಸಾಲ್ವರಾವಣರು ಮಾಡಿದ ಶಿವ ಪೂಜೆಯಲ್ಲಿ ಲಲಿತವಾದ ಸಮಂಜಸವಾದ ಮುದ್ರೆಗಳನ್ನು ಅಭಿನಯಿಸಿದರು. 'ಕಟಕಮುಖ' ಮುದ್ರೆಯನ್ನು ಹಲ್ಲುಜ್ಜುವಲ್ಲಿ 'ಪತಾಕವನ್ನು' ಕನ್ನಡಿಯನ್ನು ನೋಡಿಕೊಳ್ಳುವುದರಲ್ಲಿ ಹಲವು ಕಡೆ ಶುಚಿಯನ್ನು ಸಂಭಾಷಣೆಯ ಸಮಯದಲ್ಲಿ ಸರಿಯಾಗಿ ಉಪಯೋಗಿಸಿದರು. ಸಾಳ್ವ ರಾವಣರು ಭಸ್ಮಧಾರಣೆ ಮಾಡುವಾಗ ಅಲ್ಲಿ ಸಮರ್ಪಕ ಎನಿಸುವ 'ಮೃಗಶೀರ್ಷ' ಮುದ್ರೆಯನ್ನು ಬಳಸದಿದ್ದುದು ಸ್ಥಳೀಯ ರೀತಿಯ ಬೇಧವನ್ನು ಸೂಚಿಸುತ್ತದೆ.

**ಶ್ರೀಮತಿ ಮಾರ್ತಾ ಆಸ್ಟಿನ್ :**

"ಯಕ್ಷಗಾನದ ಬಡಗುತಿಟ್ಟು ಯಕ್ಷಗಾನ ಬಯಲಾಟದಲ್ಲಿ ರಾಕ್ಷಸ, ರಾಕ್ಷಸಿ ಹಾಗೂ ಕೃಷ್ಣನ ಪಾತ್ರಗಳು ಹಸ್ತಾಭಿನಯವನ್ನು ಸಾಂಪ್ರದಾಯಿಕವಾಗಿ ಮಾಡು ತ್ತಿದ್ದರೂ ಸಹ ಯಕ್ಷಗಾನದಲ್ಲಿ ಹಸ್ತಾಭಿನಯ ಕಡಿಮೆ ಎಂದೇ ಹೇಳಬೇಕು. ಹೆಚ್ಚಿನ ಪಾತ್ರಧಾರಿಗಳು ಹಸ್ತಾಭಿನಯವಿಲ್ಲದೆ ನೃತ್ಯವನ್ನು ಮುಗಿಸುತ್ತಾರೆ" ಎಂಬ ಅಭಿ ಪ್ರಾಯವು ಕೇವಲ ಬಡಗುತಿಟ್ಟು (ಕುಂದಾಪುರ ತಿಟ್ಟು) ಯಕ್ಷಗಾನವನ್ನು ಮಾತ್ರ ಅವಲೋಕನಗೈದು ಹೇಳಿದ ಮಾತು ಎನ್ನಬಹುದು. ಸಭಾಹಿತ ತಿಟ್ಟು (ಉತ್ತರ ಕನ್ನಡ ತಿಟ್ಟು) ಮತ್ತು ತೆಂಕು ತಿಟ್ಟಿನ ಕಲಾವಿದರುಗಳಲ್ಲಿ ಹಾಗೂ ಕುಂದಾಪುರ ತಿಟ್ಟಿನ ಅನೇಕ ಕಲಾವಿದರುಗಳಲ್ಲಿ ಹಸ್ತಾಭಿನಯ ಸಾಕಷ್ಟು ಪ್ರಮಾಣದಲ್ಲಿ ಸಮೃದ್ಧಿ ಹೊಂದಿದ್ದಲ್ಲದೆ ಉ.ಕ.ದಲ್ಲಿ ಹಸ್ತಾಭಿನಯವು ಯಕ್ಷಗಾನದ ಒಂದು ಅವಿಭಾಜ್ಯ ಅಂಗ ವಾಗಿತ್ತು. "ಹಸ್ತಾಭಿನಯವಿಲ್ಲದ ನೃತ್ಯ ಮೂಗಿಲ್ಲದ ಮುಖದಂತೆ, ಕುಂಕುಮವಿಲ್ಲದ ಹಣೆಯಂತೆ' ಎಂಬ ಅಭಿಪ್ರಾಯವೂ ಇತ್ತು. ಅಲ್ಲದೆ ಹಿಂದೆ ತಾಳಮದ್ದಳೆಯಲ್ಲಿಯೂ ಸಹ ಹಸ್ತಾಭಿನಯದೊಂದಿಗೆ ಅರ್ಥ ಹೇಳುವ ರೂಢಿ ಇದ್ದಿತ್ತೆಂದು ತಿಳಿದು ಬರುತ್ತದೆ. ಇಂದಿಗೂ ಸಹ ಕೆಲವರು ಅದೇ ಪರಂಪರೆಯಲ್ಲಿ ಅರ್ಥವನ್ನುಹೇಳಲು ಸಮರ್ಥರಿದ್ದಾರೆ. ಇವರು ಇದನ್ನೆಲ್ಲ ಅವಲೋಕಿಸದೇ ಇದ್ದುದ್ದರಿಂದ ಆ ರೀತಿಯಾಗಿ ಹೇಳಲು ಕಾರಣ ವಾಗಿದೆ.

**ಶ್ರೀಮತಿ ಕಪಿಲಾ ವಾತ್ಸಾಯನ್ :**

"ಯಕ್ಷಗಾನದಲ್ಲಿ ಉತ್ತಮ ಪಾತ್ರಗಳು ಅಭಿನಯದಲ್ಲಿ ಉಳಿದ ಕಥೆಗಳಂತೆ ಹಸ್ತಾಭಿನಯವನ್ನು ನೃತ್ಯವನ್ನು ಪ್ರದರ್ಶಿಸುತ್ತಾರೆ. ಉಳಿದ ಕಥೆಗಳಷ್ಟು ಯಕ್ಷಗಾನ ದಲ್ಲಿ ಇದು ಸಮೃದ್ಧವಾಗಿಲ್ಲ". ಯಕ್ಷಗಾನದ ಹಸ್ತಾಭಿನಯವನ್ನು ಉಳಿದ ಮಾಕ ಕಲೆಗಳಾದ ಕಥಕ್ಕಳಿ, ಕೂಚಿಪುಡಿ, ಭರತನಾಟ್ಯ ಮುಂತಾದ ಕಲೆಗಳ ಹಸ್ತಾಭಿನಯ ದೊಂದಿಗೆ ತೌಲನಿಕವಾಗಿ ನೋಡಿದಾಗ ಇದರಲ್ಲಿ ಹಸ್ತಾಭಿನಯವು ಕಡಿಮೆಯೆಂದೇ

ಹೇಳಬೇಕು. ಮೂಕ ಕಲೆಗಳ ಹಸ್ತಾಭಿನಯವು ಆ ರೀತಿಯಾಗಿ ವಿಭಜಿಸಲ್ಪಡುವುದಿಲ್ಲ. ಅಲ್ಲದೇ ಅತ್ಯಂತ ಸುಲಭವಾಗಿರುವುದಾಗಿದೆ." ಹಿಂದೊಂದು ಕಾಲದಲ್ಲಿ ಉ.ಕ ಜಿಲ್ಲೆಯಲ್ಲಿ 'ಶಬ್ದಾಭಿನಯದ' ಪರಂಪರೆ ಇತ್ತು ಎಂಬುದಾಗಿ ಕೆಲವು ಹಿರಿಯ ಕಲಾವಿದರ ಅಭಿಪ್ರಾಯ. "ಸರಸಿ ಜಾಂಬಕಿಯರೇ ಕೇಳಿ" ಎಂಬ ಈ ಪದವನ್ನು ಅಭಿನಯಿಸುವಾಗ ಎರಡು ಪತಾಕ ಹಸ್ತದಿಂದ ಅಥವಾ ಒಂದು ಶಿಲೀಮುಖ ಹಸ್ತದಿಂದ ಸರಸ್ಸ ಎಂಬುದನ್ನು 'ಅರ್ಧಪತಾಕ' ಹಸ್ತದಿಂದಲೂ 'ಜ' (ಹುಟ್ಟು) ಎಂಬುದನ್ನು ಸರಸಿಜ ಎಂಬುದನ್ನು 'ಅಲಪದ್ಮ' ಹಸ್ತದಿಂದಲೂ ಜಾಂಬಕಿಯೆಂಬುದನ್ನು 'ಅರ್ಧಪತಾಕ' ಅಥವಾ ಚತುರಹಸ್ತದಿಂದಲೂ 'ಕೇಳಿ' ಎಂಬುದನ್ನು ಸೂಚಿಹಸ್ತದಿಂದಲೂ ಅಭಿನಯಿಸಿ ತೋರಿಸುತ್ತಿದ್ದರು. ಇಂದಿಗೂ ಸಹ ಕೆಲವು ಹಿರಿಯ ಕಲಾವಿದರು ಹಾಗೆ ತೋರಿಸಿದ್ದನ್ನು ಲೇಖಕ ಕಂಡಿರುತ್ತಾನೆ.

**ಜಿ. ಆರ್. ಪಾಂಡೇಶ್ವರ :**

ಪುರಾಣೋಕ್ತವಾದ ಕಥೆಗಳೇ ಈ ನಾಟಕ ವಸ್ತುಗಳಾಗಿರುವುದರಿಂದ ರಾಮ, ಧರ್ಮರಾಯ ಮೊದಲಾದ ಧೀರೋದಾತ್ತ ನಾಯಕರ ಒಡ್ಡೋಲಗದಂತೆ ಧೀರೋದ್ಧತ ಪ್ರತಿನಾಯಕರಾದ ರಾವಣ, ರಾವಣಾದಿಗಳ ಹಾಗೂ ಅದೇ ಪ್ರಕಾರ ವಿವಿಧ ರಾಕ್ಷಸ ರಾಜನ ಒಡ್ಡೋಲಗದಲ್ಲಿ ತೆರೆಯ ಹಿಂದೆ ನಿಂತು ಪಾತ್ರಗಳು ಕೆಲವೊಂದು ಶಾಸ್ತ್ರೀಯವಾದ ಅಂಗನ್ಯಾಸಗಳ ಸಾಭಿನಯ ನೃತ್ಯ ಮಾಡುವುದು ಬಹು ಅರ್ಥಗರ್ಭಿತವಾಗಿರುತ್ತದೆ. ಈ ಅಭಿನಯಗಳಲ್ಲಿ ಹಸ್ತಮುದ್ರಿಕೆಗಳೇ ಹೆಚ್ಚಿನ ಕಾರ್ಯ ಮಾಡುವವು. 'ಹಸ್ತಲಕ್ಷಣ ದೀಪಕೆ'ಯಲ್ಲಿ ಹೇಳಲ್ಪಟ್ಟಿರುವ 24 ಮೂಲ ಮುದ್ರಿಕೆಗಳಲ್ಲಿ 1) ಶೂರತ್ವ ಮತ್ತು ಪ್ರಭುತ್ವ ಸೂಚಕವಾದ ಶಿಖರ ಮುದ್ರೆ, 2) ದಂತಾವಧಾನದಲ್ಲಿ ಮೃಗಶೀರ್ಷ ಮತ್ತು ಕಟಕ ಮುದ್ರೆ, 3) ಭಸ್ಮಧಾರಣಕ್ಕೆ ಪಲ್ಲವ ಮುದ್ರೆ, 4) ಕನ್ನಡಿ ನೋಡುವಲ್ಲಿ ಪತಾಕ ಮುದ್ರೆ, 5) ಶಕ್ತಿ ಪ್ರದರ್ಶನದಲ್ಲಿ ಮುಷ್ಟಿ ಮುದ್ರೆ, 6) ಪಾಲನ ವ್ಯಕ್ತನೆಯ ಕರ್ತರಿ ಮುದ್ರೆ, ಹೀಗೆ ಆರು ಮುದ್ರೆಗಳನ್ನು ಈ ಒಡ್ಡೋಲಗದಲ್ಲಿ ನೋಡಬಹುದು.

**ಡಾ. ಎನ್. ಆರ್. ನಾಯಕ :**

"ಯಕ್ಷಗಾನ ನೃತ್ಯಕ್ಕೆ ಹೆಚ್ಚಿನ ಶಾಸ್ತ್ರೀಯತೆ ಕೊಡುವ ಹವ್ಯಾಸದಿಂದ ಶೈಲಿಗೆ ಸರಿಹೊಂದದ ನಾಟ್ಯ ಶಾಸ್ತ್ರೋಕ್ತ ಮುದ್ರೆಗಳನ್ನು ಬಲಾತ್ಕಾರವಾಗಿ ತಂದು ಯಕ್ಷಗಾನದ ಗಂಡುಗಾಡಿಯನ್ನುಕೊಲ್ಲುತ್ತಿದ್ದಾರೆ" ಎಂಬ ಈ ಮಾತು ಯಕ್ಷಗಾನಕಲೆಯ ಆಳವಾದ ಜ್ಞಾನ ಅಥವಾ ಹಿರಿಯ ಕಲಾವಿದರ ಸಂಪರ್ಕವಿಲ್ಲದೆ ಹೇಳಿದ ಮಾತು ಎಂಬುದು ವ್ಯಕ್ತವಾಗುತ್ತದೆ. ಯಕ್ಷಗಾನಕ್ಕೆ "ಹಸ್ತಾಭಿನಯವು ಬಲಾತ್ಕಾರವಾಗಿ ತಂದದು ಎಂಬುದು ಸತ್ಯಕ್ಕೆ ದೂರವಾದ ಮಾತು. "ಮೊದಲು ಆಂಗಿಕ ಚಲನೆಯಲ್ಲಿ ಭರತ ನಾಟ್ಯದ ಮುದ್ರೆಗಳಿದ್ದವು ಎನ್ನುತ್ತಾರೆ ಸಂಪ್ರದಾಯವಾದಿಗಳು. ಹಾಗಿದ್ದರೆ ಮಧ್ಯೆ

ಕೆಲವುಕಾಲ ಅವು ಮರೆತಿರಬೇಕು. ಪದಕ್ಕೆ ಅಭಿನಯವನ್ನು ಹಿಡಿಯುವಾಗ ಕೆಲವು ಉತ್ತರ ಕನ್ನಡ ಜಿಲ್ಲೆಯಲ್ಲಿದ್ದರು. ಇಂದಿಗೂ ದಕ್ಷಿಣ ಕನ್ನಡದವರಿಗಿಂತ ಉತ್ತರ ಕನ್ನಡದ ನಟರಲ್ಲಿ ತೋರಿಬರುವ ವಿಶಿಷ್ಟತೆ ಇದು. ಈ ಹಸ್ತಾಭಿನಯಕ್ಕೆ ದೃಷ್ಟಿಗತಿ ಮತ್ತು ಮುಖ ಮುದ್ರೆ (ಫೇಶಿಯಲ್ ಎಕ್ಸ್‌ಪ್ರೆಶನ್)ಹೊಂದಿಕೊಂಡಿರುವುದು ಹೆಚ್ಚಿನ ಪರಿಣಾಮ ಉಂಟಾಗುತ್ತದೆ.

## ವಿ. ಸೀತಾರಾಮಯ್ಯ :

"ಇಲ್ಲಿಯೂ ಖಚಿತವಾದ ಹಸ್ತಮುದ್ರೆಗಳ ನಡೆಚಾರಿ ಮಂಡಲಗಳ ಸಮಯ ಸಂಕೇತಗಳಿವೆ. ಅದನ್ನು ಶಾಸ್ತ್ರಬದ್ಧವಾಗಿ ಖಚಿತವಾದ ತರಬೇತಿ ಶಿಕ್ಷಣ ಇಲ್ಲದೆ ನಾಟ್ಯಶಾಸ್ತ್ರದ ಮುದ್ರಾದಿಗಳ ಅರಿವಿಲ್ಲದೆ ಇವರು ತಮ್ಮ ಭಾವವನ್ನು ಅಭಿನಯಿಸ ಬೇಕು" ಎಂಬ ಮಾತನ್ನು ಓದಿದಾಗ ಶಾಸ್ತ್ರಾಭ್ಯಾಸ ಇಲ್ಲದವನೂ ಸಹ ಗುರುಮುಖೇನ ಹಸ್ತವನ್ನು ಅರಿತು ಅದನ್ನು ಬಳಸುತ್ತಿದ್ದನು ಎಂಬುದು ವ್ಯಕ್ತವಾಗುತ್ತದೆ. ಯಕ್ಷ ಗಾನವು ಹಿರಿಯರಿಂದ ಕಿರಿಯರಿಗೆ, ಗುರುಗಳಿಂದ ಶಿಷ್ಯರಿಗೆ, ತಂದೆಯಿಂದ ಮಗನಿಗೆ ಸಾಂಪ್ರದಾಯಿಕವಾಗಿ ಬಂದ ಕಲೆ. ಆದಕಾರಣ ಕಲಾವಿದರಿಗೆ ಅದರ ಆಳ ಅಗಲಗಳ ಜ್ಞಾನ ಇಲ್ಲದಿರುವುದು".

## ಗಣಪತಿ ಪರಮಯ್ಯ ಹಾಸ್ಯಗಾರ ಕರ್ಕಿ :

"ಯಕ್ಷಗಾನದಲ್ಲಿ ಹಸ್ತಾಭಿನಯ ಮುದ್ರೆ ಎಂದಿನಿಂದ ಪ್ರಾರಂಭವಾಯಿತೆಂಬ ಐತಿಹ್ಯ ನನಗೆ ಸ್ಪಷ್ಟವಾಗಿ ತಿಳಿದಿಲ್ಲ. ಆದ್ರೆ ಇದು ನನ್ನ ತಿಳುವಳಿಕೆಯ ಮಟ್ಟಿಗೆ ಸಾಂಪ್ರದಾಯಿಕ (ಪರಂಪರಾಗತ)ವಾಗಿದೆ. ನನ್ನ ತೀ. ದಿ. ಪರಮಯ್ಯ ಹಾಸ್ಯಗಾರ ಹಾಗೂ ನಮ್ಮ ನೆರೆಮನೆಯವರಾದ ದಿ|| ಗುಬ್ಬಿ ಗಣಪತಿ ಅವರು (ದಿವಂಗತರಾಗಿ 59 ವರ್ಷವಾಗಿರಬೇಕು) ಯಕ್ಷಗಾನ ನಾಟ್ಯ, ಮುದ್ರೆ, ಭಾವ, ಭಂಗಿ, ನವರಸ ಪ್ರಧಾನ ವಾಗಿದ್ದು ಇದಕ್ಕೆ ಭರತಶಾಸ್ತ್ರವೇ ಆಧಾರ ಎಂದು ಹೇಳಿದ್ದನ್ನು ಕೇಳಿದ್ದೇನೆ. ನನ್ನ ತೀ. ಅವರು ಎಷ್ಟೋ ಸಲ "ತುರಗೆ ಖಂಡನೆ ವಾಯು ವನವಸ್ತುನಿಷೇಧಕೆ"........... ಮೊದಲಾದ ಶ್ಲೋಕಗಳನ್ನು ಉದ್ಗರಿಸಿದುದನ್ನು ಕೇಳಿದ್ದೇನೆ, ಕಳೆದ 20–25 ವರ್ಷ ಗಳ ಹಿಂದೆ ಅನುಭವಿಕ ಪ್ರೇಕ್ಷಕರೆಷ್ಟೋ ಕರ್ಕಿ ಪರಮಯ್ಯ ಹಾಸ್ಯಗಾರ ಹಸ್ತಾಭಿನಯ ಭಾವ ಭಂಗಿ, ಶಬ್ದ, ಶಬ್ದಕ್ಕನುಸಾರವಾಗಿ ತಾಳ–ಲಯಬದ್ಧವಾಗಿದ್ದು ಅರ್ಥಸೂಚಿ ಸುವದಾಗಿದೆ, ಎಂದು ಶ್ಲಾಘಿಸಿದ್ದಾರೆ. ಮುದ್ರೆಗಳು ನನ್ನ ತಿಳುವಳಿಕೆಯ ಮಟ್ಟಿಗೆ ಗುರುಮುಖೇನ, ಪರಂಪರಾಗತವಾಗಿ ಶೃತಿ, ಸ್ಮೃತಿ, ಎಂಬಂತೆ ಬರುತ್ತಿದ್ದವು ಚಿಕ್ಕಂದಿನಿಂದಲೇ ಕಲಿಯುತ್ತಿದ್ದರಿಂದ ಗುರುಗಳು ಹೇಳಿ ಕೊಡುತ್ತಿರುವುದನ್ನೆ ನಡೆಸಿ ಕೊಂಡು ಬರುತ್ತಿದ್ದರು. ಸಾಮಾನ್ಯವಾಗಿ ಹಿಂದಿನ ಕಲೆಗಾರರು ಹೆಚ್ಚಿನ ವಿದ್ಯಾ ಪರಿಣತರಲ್ಲದ್ದರಿಂದ ಆಗಿನವರಂತೆ ವಿಮರ್ಶಕವೇದ್ಯರಾಗಿದ್ದಿಲ್ಲ".

ದಿ|| ಶಿವಣ್ಣ ಗಾಂವಕರ :

"ಶ್ರೀಯುತರು ಯಕ್ಷಗಾನದ ಹಸ್ತಾಭಿನಯದಲ್ಲಿ ಹೊಸ ವಿಚಾರವನ್ನು ತಿಳಿಸಿದ ಓರ್ವ ವೇಷಧಾರಿ. ಅವರ ಅಭಿಪ್ರಾಯದಲ್ಲಿ "ಯಕ್ಷಗಾನದ ಸೌರಾಷ್ಟ್ರ ತ್ರಿವುಡೆ ತಾಳ ಮಧ್ಯಮಾವತಿ ತ್ರಿವುಡೆ, ರೇಗುಪ್ತಿ ಮತ್ತು ಕಾಂಬೋಧಿ ಝಂಪೆ ತಾಳಗಳಲ್ಲಿ ಹಸ್ತಾಭಿನಯವು ಕಡಿಮೆಯಾಗಿದ್ದು, ದುಃಖ ರಸವನ್ನು ಅಭಿವ್ಯಕ್ತಿಸುವಾಗ ಹಸ್ತಾಭಿನಯವು ಬೇಕಿಲ್ಲ. ಯಕ್ಷಗಾನಕ್ಕೆ ಹಸ್ತಾಭಿನಯ ಪ್ರವೇಶವು ಸಾಂಪ್ರದಾಯಿಕವಾಗಿ ಆಗಿದೆ. ಹಸ್ತಾಭಿನಯವಿಲ್ಲದ ಅಭಿನಯವು ಕುಂಕುಮವಿಲ್ಲದ ಹಣೆಯಂತೆ" ಎಂಬುದೇ ಅವರ ಅಭಿಪ್ರಾಯ.

ಶಿವರಾಮ ಹೆಗಡೆ ಕೆರೆಮನೆ :

ಶ್ರೀಯುತರು ಯಕ್ಷಗಾನಕ್ಕೆ ಪ್ರಪ್ರಥಮವಾಗಿ ಕೇಂದ್ರ ಸಂಗೀತ ನಾಟಕ ಅಕಾಡಮಿಯ ಪುರಸ್ಕಾರವನ್ನು ತಂದವರು. "ಯಕ್ಷಗಾನದಲ್ಲಿ ಹಸ್ತಾಭಿನಯವು ಒಂದು ಅತಿ ಪ್ರಧಾನ ಭಾಗವಾಗಿರುವದು. ನಮ್ಮ ಬಡಗು ಉತ್ತರ ಕನ್ನಡ ತಿಟ್ಟಿನಲ್ಲಿ ಉಳಿದೆರಡು ತಿಟ್ಟಿಗಿಂತ ಹಸ್ತಾಭಿನಯವು ಹೆಚ್ಚಾಗಿರುವದು. ಇದಕ್ಕೆ ಕಾರಣ ಭಾಗವತನು ಅತಿ ವಿಲಂಬಿತ ಲಯದಲ್ಲಿ ಹಾಡನ್ನು ಹಾಡುವದು. ಅದ್ದರಿಂದ ಕಲಾವಿದನು ಹಸ್ತಾಭಿನಯವನ್ನು ಸುಲಭವಾಗಿ ತೋರಿಸಬಹುದು. ಆದರೆ ಯಕ್ಷಗಾನದಲ್ಲಿ ಇದರ ಬೆಳವಣಿಗೆ ಸಾಕಷ್ಟು ಆಗಲಿಲ್ಲ. ಅಂದಿನಿಂದ ಇಂದಿಗೆ ಅದರ ಅವನತಿಯೇ ಆಗುತ್ತಿದೆ. ನಾನು ವಿದ್ಯಾರ್ಥಿಯಾಗಿದ್ದಾಗ ಹಿರಿಯ ಕಲಾವಿದರಾದ ಮೂಡ್ಕಣಿ ನಾರಾಯಣ ಹೆಗಡೆಯವರು ಸುಮಾರು ನೂರು ವಿಧದ ಹಸ್ತಾಭಿನಯವನ್ನು ಮಾಡಿ ತೋರಿಸುತ್ತಿದ್ದರು. ಆದರೆ ನಾನು ಸುಮಾರು ಐವತ್ತನ್ನು ಮಾತ್ರ ಮಾಡಿತೋರಿಸಲು ಸಮರ್ಥನಿದ್ದೇನೆ. ನಾನು ಕಲಿಯುತ್ತಿದ್ದಾಗ ನಮ್ಮ ಗುರುಗಳು ಪದ್ಯಗಳಿಗೆ ಹಸ್ತಾಭಿನಯವನ್ನು ತಾವೇ ಸ್ವತಃ ಮಾಡಿ ತೋರಿಸುತ್ತಿದ್ದರು. ಇಂದು ಆ ಪರಂಪರೆ ಇಲ್ಲವಾಗಿದೆ. ನನ್ನ ಅನುಭವದ ಒಂದು ಘಟನೆಯನ್ನು ಹೇಳುತ್ತಿದ್ದೇನೆ. ಒಮ್ಮೆ ನಾನು ಕೃಷ್ಣಾರ್ಜುನ ಕಾಳಗದ ಅರ್ಜುನನನ್ನು ಮಾಡುತ್ತಿದ್ದೆ. ಆಗ ನನಗೆ ಒಂದು ಪದ್ಯಕ್ಕೆ ಹಸ್ತಾಭಿನಯವು ಮರೆತುಹೋಗಿತ್ತು. ಅದನ್ನು ನೋಡಿದ ಸಂಸ್ಕೃತ ಬಲ್ಲ ಶ್ರೀ ರಾಮ ಭಟ್ ಕರ್ಕಿ ಎಂಬುವವರೊಬ್ಬರು ನಂತರ ಚೌಕಿಗೆ ಬಂದು ಆ ಪದಕ್ಕೆ ಹೀಗೆ ಹಸ್ತಾಭಿನಯವನ್ನು ಮಾಡಬೇಕೆಂದು ತೋರಿಸಿದರು. ಆ ಅಭಿನಯನವನ್ನು ಮೂಡ್ಕಣಿ ನಾರಾಯಣ ಹೆಗಡೆ ಹಾಗೂ ನನ್ನ ಗುರುಗಳಾದ ಅಣ್ಣಾ ಹಿತ್ಲ ಸದಾನಂದ ಹೆಗಡೆ ಇವರಿಗೆ ತೋರಿಸಿದಾಗ ಅದು ಸರಿ ಎಂದು ಅವರು ಅಭಿಪ್ರಾಯ ಪಟ್ಟರು".

**ಮೂಂಬಾಡಿ ನಾರಾಯಣ ಭಾಗವತ :**

ಹನುಮಂತನು ಮಹಾವಿಷ್ಣುವಿನ ದಶಾವತಾರದ ಮುದ್ರೆಗಳನ್ನು ಕಾಣಿಸಿ ಕೊಂಡು ಅನನ್ಯ ಭಕ್ತಿಯನ್ನು ಅಭಿನಯಿಸುವನು. ರಾವಣನು ಅರುಣೋದಯದಲ್ಲಿ ಎದ್ದು ಶೌಚಾದಿಗಳನ್ನು ತೀರಿಸಿ ಕನ್ನಡಿಯಲ್ಲಿ ಮುಖವನ್ನು ನೋಡುತ್ತ ಹಲ್ಲುಜ್ಜುವ ಕ್ರಮವನ್ನು ಮುದ್ರೆಗಳಿಂದ ಕಾಣಿಸುವನು. ಅನಂತರ ಮುಖ ಪ್ರಕ್ಷಾಳನ ಮಾಡಿ ನದಿ ಯಲ್ಲಿ ಸ್ನಾನ ಮಾಡಿ ಶುಚಿರ್ಭೂತನಾಗಿ ಕುಲದೇವತೆಯಾದ ಸಾಂಬಶಿವನನ್ನು ಅನನ್ಯ ಭಾವದಿಂದ ಸ್ಮರಿಸಿ ಭಸ್ಮ ಲೇಪನ ಮಾಡುವ ಕ್ರಮವನ್ನು ಕೈಗಳ ಮುದ್ರೆಗಳಿಂದ ಕಾಣಿಸುವನು. ಶಿವಭಕ್ತನಾದ ಕಾರಣ ರಾವಣನು ಸ್ವಚ್ಛವಾದ ಮರಳಿನಿಂದ ಲಿಂಗ ವನ್ನು ಮಾಡಿ ಗಂಧ ಧೂಪ, ನೈವೇದ್ಯ, ಮಂಗಳಾರತಿ ಮುಂತಾದ ಷೋಡಶೋಪ ಚಾರಗಳಿಂದ ಪೂಜಿಸುವ ಕ್ರಮಬದ್ಧ ಮುದ್ರೆಗಳಿಂದ ರಸಭರಿತವಾಗಿ ಕಾಣಿಸುವನು.

**ದಿ|| ಮೂರೂರು ಕೃಷ್ಣ ಮಾಣಿ (ಹೆಗಡೆ) :**

ಶ್ರೀಯುತರು ತಾನು ಹಸ್ತಾಭಿನಯವನ್ನು ಕಲಿತ ರೀತಿಯನ್ನು ಈ ರೀತಿ ವಿವರಿಸು ತ್ತಾರೆ. "ಶಂಭು ಭಾಗವತರು ನನಗೆ ಹಸ್ತಾಭಿನಯವನ್ನು ಭರತಕೋಶ, ಭರತಶಾಸ್ತ್ರ ದಿಂದ ನೋಡಿ ಹೇಳಿಕೊಡುತ್ತಿದ್ದರು. ಈ ಪುಸ್ತಕದಲ್ಲಿ ಹಸ್ತಮುದ್ರೆಗಳು, ರಸ ಭಾವ ಗಳ ಅಭಿನಯಗಳು ಹೇಳಲ್ಪಟ್ಟಿವೆ ಎಂದವರು ಹೇಳುತ್ತಿದ್ದರು. ಆ ಪುಸ್ತಕವನ್ನು ಕೆಲವು ದಿನ ನಾನು ಇಟ್ಟುಕೊಂಡಿದ್ದೆ, ಈಗ ಅದು ನನ್ನಲ್ಲಿಲ್ಲ. ನನ್ನ ಗುರುಗಳು ಸ್ತ್ರೀ ಯರಿಗೆ ಪ್ರತ್ಯೇಕವಾದ ಹಸ್ತಗಳು, ಪುರುಷರಿಗೆ ಪ್ರತ್ಯೇಕವಾದ ಹಸ್ತಗಳು ಇವೆ ಎಂದು ಹೇಳಿ ತೋರಿಸುತ್ತಿದ್ದರು. ಅದನ್ನೇ ನಾನು ಅನುಸರಿಸುತ್ತಿದ್ದೇನೆ" ಇವರು ಹೆಸರಿಸುವ ಭರತಕೋಶ ಯಾವುದೆಂದು ಹೇಳಲು ಸಾಧ್ಯವಿಲ್ಲ. ಕಾರಣವೇನೆಂದರೆ ಭರತಕೋಶ ಎಂದು ಶ್ರೀ ರಾಮಕೃಷ್ಣ ಕವಿಗಳಿಂದ ಸಂಪಾದಿತವಾಗಿದ್ದು ಇದು ಭಾರತೀಯ ನೃತ್ಯ, ಸಂಗೀತ ಕಲೆಗಳ ಕೋಶವಾಗಿರುವದು. ಈ ಭರತಕೋಶವು ಇದಾಗಿರಲಿಕ್ಕೆ ಸಾಧ್ಯ ವಿಲ್ಲ. ಇನ್ನೊಂದು 'ಭರತಶಾಸ್ತ್ರ' ಬಹುಶಃ ಈ ಗ್ರಂಥವು ಮೈಸೂರಿನ ದೇವದಾಸಿ ಯಾಗಿದ್ದ ವೆಂಕಟ ಸುಂದರಾಸಾನಿ ಎಂಬುವಳಿಂದ ರಚಿಸಲ್ಪಟ್ಟ "ರಸಿಕ ಜನ ಮನೋ ಲ್ಲಾಸಿನೀ ಸಾರ ಸಂಗ್ರಹ ಭರತಶಾಸ್ತ್ರ" ಎಂಬ ಗ್ರಂಥವಾಗಿರಬಹುದು. ಶ್ರೀ ಕೃಷ್ಣ ಭಂಡಾರಿ ಕರ್ಕಿ ಹಾಗೂ ಯಕ್ಷಗಾನ ಸಭಾ ಲಕ್ಷಣ ಮತ್ತು ಪ್ರಸಂಗ ಪೀಠಿಕೆ ಈ ಎರಡೂ ಗ್ರಂಥಗಳು ಆ ಗ್ರಂಥದಲ್ಲಿಯೂ ಶ್ಲೋಕಗಳನ್ನೇ ಆರಿಸಿಕೊಂಡು ತಮ್ಮ ಗ್ರಂಥ ರಚನೆಯನ್ನು ಮಾಡಿರುತ್ತಾರೆ. ಕಲಾವಿದರು ತೋರಿಸುವ ಹಸ್ತಾಭಿನಯ ಹಾಗೂ ಈ ಗ್ರಂಥದಲ್ಲಿ ಹೇಳಿದ ಹಸ್ತಾಭಿನಯಗಳು ಒಂದೇ ಆಗಿರುವದರಿಂದ ಅವರು ಹೇಳಿದ ಗ್ರಂಥವು ಇದೇ ಆಗಿರುವದೆಂಬ ನಿರ್ಣಯಕ್ಕೆ ಬರಬಹುದಾಗಿದೆ.

**ಧಾರೇಶ್ವರ ಸುಬ್ಬ :**

ನನಗೆ ಯಕ್ಷಗಾನದ ನೃತ್ಯ ಹಾಗೂ ಅಭಿನಯವನ್ನು ಕಲಿಸಿದವರು ಅಂಕೋಲಾ ತಾಲೂಕಿನ ಹಿರೇಗುತ್ತಿಯ ನಾಗಪ್ಪ ಭಾಗವತರು. ಅವರು ಪ್ರಸಂಗವನ್ನು ಕಲಿಸುವಾಗ ಪ್ರತಿ ಪದ್ಯವನ್ನು ಹಾಡಿ ಅದರ ಶೃತಿ, ರಾಗ, ತಾಳವನ್ನು ಪರಿಚಯಿಸಿ ಪದ್ಯವನ್ನು ಬಾಯಿಯಿಂದ ಹೇಳುತ್ತ ತಾವೇ ಹೆಜ್ಜೆಯಿಟ್ಟು, ಹಸ್ತಾಭಿನಯ ಮಾಡುತ್ತ ಕುಣಿದು ತೋರಿಸುತ್ತಿದ್ದರಲ್ಲದೆ ನಾವು ಅವರು ಹೇಳಿದಂತೆ ಅಭ್ಯಾಸ ಮಾಡುವಾಗ ಸ್ವತಃ ತಾವೇ ನಮ್ಮ ಕಾಲುಗಳನ್ನು ತಮ್ಮ ಕೈಯಿಂದ ಎತ್ತಿ ಇಡಿಸಿ ಹಸ್ತಾಭಿನಯ ಮುದ್ರೆಗಳನ್ನು ಯಾವ ರೀತಿ ರೂಪಿಸಬೇಕೆಂದು ತೋರಿಸಿಕೊಡುತ್ತಿದ್ದರು. ಈ ರೀತಿ ಅವರಿಗೆ ಒಂದು ಪ್ರಸಂಗವನ್ನು ಕಲಿಸಲು ಒಂದು ಒಂದೂವರೆ ತಿಂಗಳು ಬೇಕಾಗುತ್ತಿತ್ತು. ನಾನು ಕಂಡಂತೆ ಬಡಗುತಿಟ್ಟಿನ ಯಕ್ಷಗಾನ ಕಲಾವಿದರಲ್ಲಿ ಪ್ರತಿ ಪದ್ಯಕ್ಕೂ ನಾಟ್ಯದೊಡನೆ ಹಸ್ತಾಭಿನಯ ಮಾಡುತ್ತಿದ್ದರು. ಆದರೆ ತಂಕುತಿಟ್ಟಿನ ಪಾತ್ರಧಾರಿಗಳಲ್ಲಿ ಕೆಲವರಲ್ಲಿ ಮಾತ್ರ ಈ ಅಂಗಾಭಿನಯ ನಾಟ್ಯ ಮುದ್ರೆಗಳು ಸ್ಫುಟವಾಗಿ ತೋರುತ್ತಿದ್ದವು. ಇದಕ್ಕೆ ಕಾರಣ ತೆಂಕುತಿಟ್ಟಿನ ಹಾಡುಗಾರಿಕೆಯಲ್ಲಿಯ ತ್ವರಿತಗತಿಯೇ ಕಾರಣವೆಂದು ನನ್ನ ಅನಿಸಿಕೆ.”

**ದೇವರಾಯ ಪೈ :** “ನಾನು ಗುರು ವೀರಭದ್ರ ನಾಯ್ಕ, ಕೆರೆಮನೆ ಶಿವರಾಮ ಹೆಗಡೆ ಮಹಾಬಲ ಹೆಗಡೆ, ಎಂ. ಎನ್. ನಾಯ್ಕ ಅಂಕೋಲಾ, ಹರಂಜಾಲು ವೆಂಕಟ್ರಮಣ ಉಡುಪಿ ಬಸವ ನಾಯ್ಕ, ಕೊಂಡದಕುಳಿ ರಾಮ ಹೆಗಡೆ, ಮೂಡಕಣಿ ನಾರಾಯಣ ಹೆಗಡೆ ಮುಂತಾದ ಕಲಾವಿದರೊಂದಿಗೆ ವೇಷ ಮಾಡಿದ್ದೇನೆ ಮತ್ತು ಗಣಪತಿ ಪ್ರಭು, ಬಾಬಣ್ಣ ಶ್ಯಾನಭಾಗರು ವೀರಭದ್ರ ನಾಯ್ಕ ಕೊಕ್ಕರಣೆ, ನರಸಿಂಹ ಉಡುಪಿ ಬಸವರ ಪಾತ್ರಗಳನ್ನು ನಾನು ನೋಡಿದ್ದೇನೆ. ಅವರು ಮುದ್ರೆಗಳನ್ನು ಮಾಡುತ್ತಿದ್ದರು. ವೀರಭದ್ರ ನಾಯ್ಕ, ಗಣಪತಿ ಪ್ರಭು ಮುಂತಾದವರು ಮುದ್ರೆಗಳನ್ನು ಸ್ವಲ್ಪ ಪ್ರಮಾಣದಲ್ಲಿ ತೋರಿಸುತ್ತಿದ್ದರು. ಕಮಲ, ಕಲಹ, ಕಣ್ಣು, ಭ್ರಮರ, ಆನಂದ, ವೀರತ್ವ, ಕುದುರೆ ಸರೋವರ ಮೊದಲಾದ ವಸ್ತುಸ್ಥಿತಿಗಳನ್ನು ತಿಳಿದು ಕೈಯಿಂದ ಮುದ್ರೆಗಳನ್ನು ತೋರಿಸುವ ಕ್ರಮ ಇದೆ.

**ವೆಂಕಟ್ರಮಣ ನಾಯ್ಕ :**

“ನಾನು ನನ್ನ ಗುರು ಶಂಬು ಭಟ್ಟರಿಂದ ಮೊದಲು ಭಾವ ಕಲಿತಿದ್ದು. ಅವರು ಪದ ಹೇಳಿ ಭಾವ ಮಾಡಿ ನನಗೆ ತೋರಿಸಿ ಇಂಥಾ ಶಬ್ದಕ್ಕೆ ಹೀಗೆ ಭಾವ ಮಾಡಬೇಕು. ನೀನೂ ಮಾಡು ಎಂತಾ ಪದ ಹೇಳುತ್ತಿದ್ದರು. ನನಗೆ 1–2 ಸಲ ಗುರುಗಳು ತೋರಿಸಿದರೆ ಮುಂದೆ ಗುರುಗಳು ಮನಸ್ಸಿಗೆ ಸಮಾಧಾನವಾಗುವ ಹಾಗೆ ಭಾವಮಾಡಿ ತೋರಿಸುತ್ತಿದ್ದೆ.

**ವೆಂಕಟ್ರಮಣ ಭಾಗವತ :**

"ನನ್ನ ದೃಷ್ಟಿಯಿಂದ ಹೇಳುವುದಾದರೆ ಹಸ್ತಾಭಿನಯ ಹಾಗೂ ಮುದ್ರೆ ಅಥವಾ ಮುದ್ರಿಕಗಳು ಇವುಗಳಲ್ಲಿ ಸ್ವಲ್ಪ ಅಂತರವಿದೆ. ಮುದ್ರೆಗಳು ಯಾವುದೇ ಸಂಕೇತವನ್ನು ಪ್ರಕಟಿಸಿದರೆ ಉದಾಹರಣೆಗೆ-ಪುತ್ರ, ಅನುಜ, ಭಾರ್ಯ ಇತ್ಯಾದಿಗಳನ್ನು ತೋರಿಸು ವಂಥಹುದು ಹಸ್ತಾಭಿನಯ ನಮ್ಮ ಭಾವನೆಗಳಿಗೆ ಅನುಗುಣವಾಗಿ ಸಹಜವಾಗಿ ಬರು ವಂತಹ ಅಭಿವ್ಯಕ್ತಿ ಸ್ವರೂಪ ಮುದ್ರೆಗಳಿಗಿಂತ ಹಸ್ತಾಭಿನಯದ ಕಾರ್ಯಕ್ಷೇತ್ರ ವಿಶಾಲ ವಾದದ್ದು. ಇವುಗಳಿಗೆ ನಿರ್ದಿಷ್ಟವಾದ ಹುಟ್ಟು ಬಹುತೇಕ ಯಕ್ಷಗಾನದ ಜನ್ಮ ದಿಂದಲೇ ಬಂದಿರಬೇಕು ; ಕಾಲನಿರ್ಣಯವಿಲ್ಲ."

**ಗೋವಿಂದ ಭಟ್ :**

"ನನಗೆ ಯಕ್ಷಗಾನದ ಹಸ್ತಾಭಿನಯದ ವಿಷಯವು ಸರಿಯಾಗಿಗೊತ್ತಿಲ್ಲ. ಯಕ್ಷ ಗಾನ ಕಲಾವಿದರು ಹಸ್ತಮುದ್ರೆಗಳನ್ನು ಕಥಕ್ಕಳಿಯಲ್ಲಿಯದನ್ನು ತೋರಿಸುತ್ತಾರೆ. ಶಿವರಾಮ ಹೆಗಡೆ, ಮಹಾಬಲ ಹೆಗಡೆ, ಶಂಭು ಹೆಗಡೆ ಹಾಗೂ ನನ್ನ ಗುರುಗಳಾದ ಕುರಿಯ ವಿಠ್ಠಲ ಶಾಸ್ತ್ರಿಗಳು ಹಸ್ತಾಭಿನಯದಲ್ಲಿ ಎರಡೂ ತಿಟ್ಟುಗಳಲ್ಲಿ ಹೆಸರಾದವರು.

**ಕರ್ಗಲ್ಲು ಸುಬ್ಬಣ್ಣ ಭಟ್ :**

"ಯಕ್ಷಗಾನದಲ್ಲಿ ಹಸ್ತಾಭಿನಯವು ಹಿಂದಿನಿಂದಲೇ ರೂಢಿಯಲ್ಲಿದೆ. ಯಕ್ಷ ಗಾನವು ಕೇವಲ ನಾಟ್ಯವಾಗಿರದೆ ಅಭಿನಯವನ್ನು ಸಹ ಹೊಂದಿರುವದು. ನಾನು ಈ ಕಲೆಯನ್ನು ಶಿವರಾಯ ಎಂಬುವವರಿಂದ ಕಲಿತಿದ್ದು, ಅವರಿಗೆ ಹಸ್ತಾಭಿನಯವು ಪದ ದೊಂದಿಗೆ ಹೇಳಿ ಕಲಿಸುವುದು ಗೊತ್ತಿತ್ತು. ನಾನು ಈ ಎಲ್ಲ ಹಸ್ತಗಳನ್ನು ಅವರಿಂದಲೇ ಕಲಿತಿದ್ದೇನೆ. ಬಹುಶಃ ಯಕ್ಷಗಾನ ಕಲೆಯನ್ನು ಚೆನ್ನಾಗಿ ಬಲ್ಲ ಯಾವನೇ ಒಬ್ಬನು ಇದನ್ನು ಪ್ರಾರಂಭಿಸಬೇಕು. ಆದರೆ ಇಂದು ಕೆಲವು ಮಾಯವಾಗುತ್ತಿದೆ."

**ದಿ|| ಕೊಂಡದಕುಳಿ ರಾಮ ಹೆಗಡೆ :**

"ನನಗೆ ಮೂಡಕಣಿ ನಾರಾಯಣ ಹೆಗಡೆಯವರು ಹಸ್ತಾಭಿನಯವನ್ನು ಕಲಿ ಸಿದ್ದರು. ಹಸ್ತಾಭಿನಯ ತಿಳಿಯದ ಯಕ್ಷಗಾನ ಕಲಾವಿದನೇ ಅಲ್ಲ ಎಂದು ಅವರು ಹೇಳುತ್ತಿದ್ದರು. ಅಲ್ಲದೇ ಇದಕ್ಕೆ ಲಿಖಿತ ರೂಪದ ಪುಸ್ತಕವಿದ್ದಿದ್ದನ್ನು ಅವರು ಹೇಳು ತ್ತಿದ್ದರು. ಅದರೊಳಗೆ ಹಸ್ತಾಭಿನಯದ ಕುರಿತು ಇದ್ದಿತ್ತೆಂದು ಹೇಳಿದ್ದರು. ಆದರೆ ನನಗೆ ಇದಕ್ಕೂ ಹೆಚ್ಚಿನ ವಿಚಾರ ಗೊತ್ತಿಲ್ಲ. ಎತ್ತಿದ ಹಸ್ತಗಳೆಲ್ಲವೂ ಹಸ್ತಾಭಿನಯ ವಲ್ಲ. ಮುದ್ರೆಗಳಿಗೆ ಕೆಲವು ವಿಶೇಷ ಅರ್ಥಗಳಿವೆ. ಹಸ್ತಾಭಿನಯವಿಲ್ಲದ ಅಭಿನಯವು ಮೂಗಿಲ್ಲದ ಮುಖದಂತೆ" ಎಂಬುದು ಅವರ ಅಭಿಪ್ರಾಯ.

**ಪದ್ರ ಚಂದ್ರ :**

"ಹಸ್ತಾಭಿನಯವು ಅನೇಕ ಶತಮಾನಗಳಿಂದ ಯಕ್ಷಗಾನಕ್ಕೆ ಬಂದಿರಬೇಕು.

ಸುಬ್ರಾಯ ಕಣ್ಣಿ, ತುಳಸಿ ವೆಂಕಟ್ರಮಣ, ಇವರು ಹಸ್ತಾಭಿನಯವನ್ನು ಚೆನ್ನಾಗಿ ಮಾಡುತ್ತಿದ್ದರು. ಯಕ್ಷಗಾನಕ್ಕೆ ಹಸ್ತಾಭಿನಯವು ಕಥಕ್ಕಳಿ ಅಥವಾ ಇತರ ಕಲೆಗಳಿಂದ ಬಂದಿರಬೇಕು.

**ಹೊಸ್ತೋಟೆ ಮಂಜುನಾಥ ಭಾಗವತ :**

"ನಾಟ್ಯಶಾಸ್ತ್ರ ಸರಚಿತ ಮುದ್ರೆಗಳೂ ಸಾಮಾಜಿಕ ವಲಯದಿಂದಲೇ ಆ ಸಂಗ್ರಹಾಲಯಕ್ಕೆ ಸೇರಿದವು. ಹಾಗಾಗಿ ಯಕ್ಷಗಾನದ ಬಳಕೆಯಲ್ಲಿರುವ, ಪತಾಕೆ, ಅರ್ಧ ಪತಾಕೆ, ತ್ರಿಪತಾಕ್, ಶಿಖರಿಣ, ಅಂಜಲಿ, ಸೂಚಿಮುಖ ಮೃಗಾಸ್ಯ ಮುಂತಾದ ಮುದ್ರಗಳು, ಸಾಮಾಜಿಕ ಸನ್ನೆಗಳ ಪರಿಷ್ಕರಣವೋ ನಾಟ್ಯಶಾಸ್ತ್ರದ ಅನುಕರಣವೋ ಹೇಳುವುದು ಕಷ್ಟ. ಕಣ್ಣಲ್ಲಿ ನಿಮೀಲಿಕ, ಸಮಸಾಟಿಗಳಿವೆ. ಭಾವ ಭಂಗಿಗಳಿಗೆ ಆದ್ಯತೆ ಇದೆ."

**ಶಂಭು ಹೆಗಡೆ ಕರೆಮನೆ :**

"ಉಳಿದ ನಾಟ್ಯ ಸಂಪ್ರದಾಯದ ಹಾಗೇ ಯಕ್ಷಗಾನ ನೃತ್ಯದಲ್ಲಿಯೂ ಸಹ ಅರ್ಥ ಸ್ಫುಟತೆಗಾಗಿ ಅಂಗಿತ ಮುದ್ರೆಗಳನ್ನು ಬಳಸಲಾಗುವದು. ನಾಟ್ಯ ಶಾಸ್ತ್ರ ಹಾಗೂ ಅಭಿನಯ ದರ್ಪಣದಲ್ಲಿ ಉಲ್ಲೇಖಿತವಾದ ಮುದ್ರೆಗಳ ಬಳಕೆಯನ್ನು ಅಲ್ಲಲ್ಲಿ ಕಾಣಬಹುದು. ಅಲ್ಲದೇ ದಿನನಿತ್ಯದ ವ್ಯವಹಾರದಲ್ಲಿ ಬಳಸುವ ಸಾಮಾನ್ಯ ಮುದ್ರೆಗಳನ್ನು ಕಲಾತ್ಮಕವಾಗಿ ಬಳಸುವ ಸಂಪ್ರದಾಯವೂ ಇದೆ. ಕಲಾವಿದ ತನ್ನ ಕಲ್ಪನಾ ಸಾಮರ್ಥ್ಯದಿಂದ ಅನೇಕ ಹೊಸ ಬಗೆಯ ಮುದ್ರೆಗಳನ್ನು ಸೃಷ್ಟಿಸಿದ ಉದಾಹರಣೆಯನ್ನು ಯಕ್ಷಗಾನದಲ್ಲಿ ಕಾಣಬಹುದು."

ಇವುಗಳೆಲ್ಲವೂ ಯಕ್ಷಗಾನದ ಹಸ್ತಾಭಿನಯದ ಕಲಿಕೆ, ಮಹತ್ವದ ಕುರಿತಾಗಿದ್ದರೆ ಇನ್ನು ಕೆಲವು ಕಲಾವಿದರು ಯಕ್ಷಗಾನದಲ್ಲಿ ಅದರ ಆರಂಭದ ಕುರಿತು ಹೀಗೆ ಹೇಳುತ್ತಾರೆ.

**ಮಹಾಬಲ ಹೆಗಡೆ ಕರೆಮನೆ :**

"ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಹಸ್ತಾಭಿನಯ ಎಂಬುದು ಸುಮಾರು 200 ವರ್ಷಗಳಿಂದಲೂ ಬಳಕೆಯಲ್ಲಿತ್ತು ಎನ್ನುವದಕ್ಕೆ ಸಾಕ್ಷಿಗಳಿವೆ. ನನಗೆ ಹಸ್ತಾಭಿನಯ ಕಲಿಸಿದ ಶ್ರೀ ಮೂಡ್ಕಣಿ ನಾರಾಯಣ ಹೆಗಡೆಯವರು ಕಾಲವಾಗಿ 30 ವರ್ಷವಾಯಿತು. ಸಾಯುವ ವೇಳೆಗೆ ಅವರಿಗೆ 85 ವರ್ಷ ಅಂದರೆ ಅವರು ಈಗ ಬದುಕಿದ್ದರೆ 105 ವರ್ಷವಾಗುತ್ತಿತ್ತು. ನಾರಾಯಣ ಹೆಗಡೆಯವರು ಅವರ ತಂದೆಯವರ ಹತ್ತಿರ ಕಲಿತಿದ್ದರಂತೆ. ಅವರ ಹೆಸರು ರಾಮ ಹೆಗಡೆ ಎಂಬುದಾಗಿ. ಶ್ರೀ ರಾಮ ಹೆಗಡೆಯವರು ಶಿವಯ್ಯನ ಶಂಭು ಹೆಗಡೆ ಎಂಬವರಲ್ಲಿ ಕಲಿತಿದ್ದರಂತೆ. ಹೀಗೆ 4–5

ತಲೆಮಾರಿನ ಹಿಂದಿನಿಂದಲೂ ನಮ್ಮಲ್ಲಿ ಹಸ್ತಾಭಿನಯವಿದ್ದುದಕ್ಕೆ ಸಾಕ್ಷಿಗಳಿವೆ.
ಇನ್ನೊಂದು ನಮ್ಮಲ್ಲಿ ಹಸ್ತಾಭಿನಯವೆಂಬುದು ಪರಂಪರೆಯಿಂದಲೂ ಇತ್ತೆಂಬುದಕ್ಕೆ
ಪ್ರಬಲ ಸಾಕ್ಷಿ ಎಂದರೆ ಸುಮಾರು 25-30 ವರ್ಷಗಳ ಹಿಂದಿನವರೆಗೂ ನಮ್ಮಲ್ಲಿ ತಾಳ
ಮದ್ದಳೆಯಲ್ಲಿ ಅರ್ಥ ಹೇಳುವ ಮೊದಲು ಪದ್ಯಕ್ಕೆ ಹಸ್ತಾಭಿನಯ ಮಾಡುತ್ತಿದ್ದರು."
"ನಾನು ಹಸ್ತಾಭಿನಯ ಕಲಿತದ್ದು ಶ್ರೀ ಮೂಡ್ಕಣಿ ನಾರಾಯಣ ಹೆಗಡೆಯವರಲ್ಲಿ.
ಅವರು ನನಗೆ ಕಲಿಸುವಾಗ ಯಕ್ಷಗಾನ ಪ್ರಸಂಗಗಳ ನಿರ್ದಿಷ್ಟವಾದ ಅಧ್ಯಯನಕ್ಕೆ
ಚೆನ್ನಾಗಿ ಒದಗಬಹುದಾದ ಕೆಲವು ಪದ್ಯಗಳನ್ನು ಆರಿಸಿ ಹೇಳಿಕೊಡುತ್ತಿದ್ದರು.
ಕೃಷ್ಣಾರ್ಜುನ ಕಾಳಗದ ಮಾನಿನೀ ಮಣಿಯ ಬಾರೆ, ತಂಗಿ ತನ್ನಯ ಕರ್ಮ ವಿದ್ಯುನ್ಮತಿ
ಯಾರು ನೀನಲೆ ಚದುರೆ, ಬಭ್ರುವಾಹನ, ಹಂಸಕೇತನಾ, ಸುಭದ್ರಾ ಕಲ್ಯಾಣ,
ಯಾತಕೆ ಮರುಳಾದಿರಿ, ರುಕ್ಮಾಂಗದ, ಹುರುಷಾಮೃತ ಬೀರುತಿರ್ಪುದು ಇತ್ಯಾದಿ
ಪದ್ಯಗಳಿಗೆ ಅಭಿನಯಿಸಿ ತೋರಿಸಿ ನನ್ನಿಂದ ಮಾಡಿಸುತ್ತಿದ್ದರು. ಮತ್ತು ಹಸ್ತದ ಹೆಸರು
ಹೇಳಿ ಅದರ ವಿನಿಯೋಗ ವಿಧಾನವನ್ನು ಹೇಳುತ್ತಿದ್ದರು. ಪತಾಕ, ತ್ರಿಪತಾಕ,
ದರ್ಪಣ, ಕಂದುಕ, ಸರ್ಪಶೀರ್ಷ, ಶಿಖರ, ಬಾಣ, ಮುಷ್ಠಿ ಈ ಮೊದಲಾದ ಹಸ್ತ
ಗಳನ್ನು ಅವುಗಳ ವಿನಿಯೋಗ ವಿಧಾನವನ್ನು ಹೇಳಿಕೊಡುತ್ತಿದ್ದರು."

## ಶ್ರೀಮತಿ ಗೌರಮ್ಮ ನಾಯಕ :

ಇವಳು ಸುಮಾರು 3 ದಶಕಗಳ ಹಿಂದೆಯೇ ಯಕ್ಷಗಾನ ರಂಗಕ್ಕೆ ತಂದೆಯಾದ
ತಿಮ್ಮಣ್ಣ ಗಾಂವಕರ ಪ್ರೋತ್ಸಾಹದಿಂದ ಬಂದು 1981ರಲ್ಲಿ ಹೈದರಾಬಾದಿನ ಟಿ. ವಿ.
ಯಲ್ಲಿ ಪಾತ್ರ ನಿರ್ವಹಿಸಿದ ಮಹಿಳೆ. "ಯಕ್ಷಗಾನದೊಂದಿಗೆ ಹಸ್ತಾಭಿನಯ ಪ್ರಾರಂಭ
ವಾಗಿರಬೇಕು. ಯಕ್ಷಗಾನಕ್ಕೆ ಸುಮಾರು ಎರಡು ಮೂರು ಶತಮಾನಗಳ ಇತಿಹಾಸ
ವಿರಬೇಕೆಂದು ನನ್ನ ನಂಬಿಕೆ. ನಾನು ಚಿಕ್ಕಂದಿನಿಂದಲೂ ಯಕ್ಷಗಾನದಲ್ಲಿ ಆಸಕ್ತಿ
ಹೊಂದಿದ್ದೆ. ನಮ್ಮ ತಂದೆಯವರು ಹಳ್ಳಿಯ ಹಿಂದುಳಿದ ಜನಕ್ಕೆ (ಆಗ) ಯಕ್ಷಗಾನ
ಕಲಿಸುತ್ತಿದ್ದರು. ನಾನು ಅದನ್ನು ನೋಡುತ್ತಿದ್ದೆ. ಆಗಾಗ ಅಭಿನಯ ಮಾಡು
ತ್ತಿದ್ದರು. ಇದರಿಂದ ಪ್ರೇರಿತವಾದ ನಮ್ಮ ತಂದೆಯವರು ತಮ್ಮ ಮಕ್ಕಳ ಮೇಳ
ಕಟ್ಟಿದರು. ಅವರಿಂದಲೇ ಹಸ್ತಮುದ್ರೆಯನ್ನು ಕಲಿತದ್ದು. ಬೇರೆ ಬೇರೆ ಮೇಳದಿಂದ
ಸ್ವಾನುಭವದಿಂದ ಬಳಸಿಕೊಂಡು ಸಂಜೆಯ ಹೊತ್ತು ನಮ್ಮ ಮನೆಯಲ್ಲಿಯೇ ಕಲಿಸಿ
ತಾವೇ ಭಾಗವತರಾಗಿ ಪ್ರತಿದಿನ 1–2 ಗಂಟೆ ಕಲಿಸುತ್ತಿದ್ದರು. ನಾವು ಅಣ್ಣ
ತಮ್ಮಂದಿರೇ 7–8 ಜನರಿದ್ದು. ತುಂಬಾ ಪ್ರಯತ್ನದಿಂದ ಕಲಿಸಿದ್ದಾರೆ. ನಮಗೆ
ಒಂದೊಂದು ಕೈ ಮರತರೆ ನಾಳೆ ಪೆಟ್ಟು ಕಾದಿರುತ್ತಿತ್ತು. ರೂಢಿಯ ನಂತರ ಅದೆ
ಪಟ್ಟಾಯಿತು. (ಒಲವು). ಬುದ್ಧಿ ಬೆಳೆದಂತೆ ಅನುಭವ ಬಂದಿತು.

ಮಲ್ಲಗದ್ದೆ ಗಣೇಶ ಹೆಗಡೆ :

"ಸುಮಾರು 500 ವರ್ಷಗಳ ಹಿಂದೆ ಪ್ರಾರಂಭವಾಗಿದೆ. ನನಗೆ ತಿಳಿದ ಮಟ್ಟಿಗೆ ಈ ಹಸ್ತಾಭಿನಯ (ಮುದ್ರೆಗಳು) ಇದರ ಕುರಿತುಇತಿಹಾಸ ಇದ್ದಿದ್ದು ನನಗೆ ಗೊತ್ತಿಲ್ಲ.

ದಿ|| ಅಳಿಕೆ ರಾಮಯ್ಯ ರೈ :

"ನಾನು ಯಕ್ಷಗಾನದ ಮುದ್ರೆಗಳನ್ನು ಹಿರಿಯ ಕಲಾವಿದರಿಂದ ಹಾಗೂ ಕೆಲವು ಪುಸ್ತಕಗಳಿಂದ ಕಲಿತುಕೊಂಡಿದ್ದೇನೆ. ಬಹುಶಃ ಇದು ಮೂರು ನೂರು ವರ್ಷಗಳಿಗಿಂತ ಹಿಂದಿನಿಂದಲೇ ಬಂದಿರಬೇಕು. ಮುದ್ರೆ ಹಾಗೂ ಹಸ್ತಾಭಿನಯಗಳಲ್ಲಿ ಸ್ವಲ್ಪ ವ್ಯತ್ಯಾಸ ಇದೆ. ಮುದ್ರೆಯು ತಮ್ಮ, ಹೆಂಡತಿ, ಮಗ, ಮುಂತಾದವುಗಳನ್ನು ಸಂಕೇತಿಸುತ್ತದೆ. ಹಸ್ತಾಭಿನಯವು ಮುದ್ರೆಗಳಿಗಿಂತ ವಿಶಾಲವಾದುದಾಗಿದೆ. ಈ ಹಸ್ತಾಭಿನಯವು ಯಕ್ಷಗಾನದ ಹುಟ್ಟಿನಿಂದಲೇ ಆರಂಭವಾಗಿರಬೇಕು. ನಾನು ಹಸ್ತಾಭಿನಯ : ಮುದ್ರೆಗಳ ಆರಂಭದ ಕುರಿತು ನಿರ್ದಿಷ್ಟವಾಗಿ ಹೇಳಲಾರೆ."

ವಿ. ಟಿ. ಶಿಗೇಹಳ್ಳಿ :

ಯಕ್ಷಗಾನದ ಹುಟ್ಟಿನಿಂದಲೇ ಹಸ್ತಾಭಿನಯ ಬಂದಿದೆ ಎಂದೇ ನನ್ನ ಅಭಿಪ್ರಾಯ. ಆದರೆ ಈ ಬಗ್ಗೆ ಆಂಧ್ರದ ಕಲಾವಿದೆಯೋರ್ವಳು ನಟವರ ಪೈಕಿ ಬರೆದ ಪುಸ್ತಕ ಒಂದನ್ನು ಶ್ರೀ ಜಿ. ಕೆ. ಯವರ ಸಂಗ್ರಹದಿಂದ ತಂದು ಓದಿದ್ದೆ. ಅದು ಯಕ್ಷಗಾನಕ್ಕೆ ಮೀಸಲಾಗಿತ್ತು. ಅದರಲ್ಲಿ ಬಗೆಬಗೆ ರೂಪು ತೋರಿದ್ದರು ; ದಾರಿ ತೋರಿದ್ದರು. ಅಂದರೆ ಸಂಸ್ಕೃತ ಶ್ಲೋಕಗಳು ಇದ್ದವು. ಬೇರೆ ಬೇರೆ ವೃತ್ತದಲ್ಲಿ ಸಹ. ಆದರೆ ಆ ಪುಸ್ತಕ ಗೆದ್ದಲು ತಿಂದು ಚುಕ್ತಾ ಆಗಿದೆಯೆಂದು ಬಳಿಕ ತಿಳಿಯಿತು.

—o—

# ಭಾವಚಿತ್ರಗಳು

1



2



3



4



5



6



7



8



9



10



10అ



12



11



13



13



14



14ಅ



15



16



16



17



18



19



20



21



22



23



24



25



26



27



28



29



30



31



32



33



34



35



36



37



38



39



40



41



42




42



44

43





45




46




47




48




# ಹಸ್ತಗಳು




ಪತಾಕ




ಶಿಖರ



ಮುಷ್ಠಿ




ಸೂಚಿ




ಮೃಗಶಿರ



ಸರ್ಪಶಿರ




ಸಿಂಹಮುಖ



ಅಲಪದ್ಮ




ಚತುರ



ಬಾಣ



ತಾಮ್ರಚೂಡ




ಹಂಸಾಸ್ಯ




ಊರ್ಣನಾಭ




ಮುಕುಳ




ತ್ರಿಶೂಲ




ಅರ್ಧಪತಾಕ




ತ್ರಿಲಿಂಗ




ಲೀಮುಖ




ಕಟಿಕಾಮುಖ



ಕರ್ಕಟ




ತಾರ್ಕ್ಷ್ಯ




ಗರುಡ





ಮಕರ




ಕೂರ್ಮ








ಚಂದ್ರಕಲಾ




ಚಕ್ರ




ಶಂಖ




ಶಿವಲಿಂಗ



ಕೀಲಕ



ವರಾಹ



ಪಾಶ

# ಭಾವಚಿತ್ರದ ಕಲಾವಿದರು

ದಿ॥ ತಿಮ್ಮಣ್ಣ ಗಾಂವಕರ 17, 44, 46
ದಿ॥ ಕೊಂಡದಕುಳಿ ರಾಮ ಹೆಗಡೆ 13 ಆ
ದಿ॥ ಮೂರೂರು ದೇವರು ಹೆಗಡೆ 27
ದಿ॥ ಅಳಿಕೆ ರಾಮಯ್ಯ ರೈ (ತೆಂಕು) 43
ದಿ॥ ಕೆರೆಮನೆ ಶಿವರಾಮ ಹೆಗಡೆ 15, 16, 18, 42
ದಿ॥ ಮಲ್ಲಗದ್ದ ಗಣೇಶ ಹೆಗಡೆ 6, 10, 21, 25, 30
ದಿ॥ ಮೂರೂರು ಕೃಷ್ಣ ಹೆಗಡೆ 3, 38, 40
ದಿ॥ ಪಿ. ವಿ. ಹಾಸ್ಯಗಾರ 2, 4, 7, 11, 37

ಶ್ರೀಯುತರುಗಳಾದ :—

ಜಿ. ಪಿ. ಹಾಸ್ಯಗಾರ 32
ನಾರಾಯಣ ಹಾಸ್ಯಗಾರ 28, 45, 48
ಕರ್ಗಲ್ಲು ಸುಬ್ಬಣ್ಣ ಭಟ್ (ತೆಂಕು) 26
ಪಡ್ರೆ ಚಂದ್ರು (ತೆಂಕು) 39
ವೆಂಕಟ್ರಮಣ ಹೆರಂಜಾಲು 42
ವಂದಾರು ಬಸವ 14
ಗೋವಿಂದ ಸೇರಿಗಾರ 47, 24
ಕೂಳಗಿ ಅನಂತ ಹೆಗಡೆ 5
ವಿ. ಜಿ. ಶಿರೇಹಳ್ಳಿ 8–41
ಹೊಸ್ತೋಟ ಮಂಜುನಾಥ ಭಾಗವತ 12, 15, 22
ಕೆರೆಮನೆ ಮಹಾಬಲ ಹೆಗಡೆ 1, 20, 33
ಕೆರೆಮನೆ ಶಂಭು ಹೆಗಡೆ 13
ಕೆರೆಮನೆ ರಾಮ ಹೆಗಡೆ 35
ಕೊಳಹಳ್ಳಿ ಹಿರಿಯ 23
ಕೊಳ್ಯೂರು ರಾಮಚಂದ್ರರಾವ್ 14
ಚಿಟ್ಟಾಣಿ ರಾಮಚಂದ್ರ ಹೆಗಡೆ 31
ಶ್ರೀಮತಿ ಗೌರಮ್ಮ ನಾಯಕ್ 29

ಇವರಲ್ಲದೆ ಇನ್ನೂ 70 ಜನ ಕಲಾವಿದರು ಇದಕ್ಕೆ ಸಹಕರಿಸಿದ್ದು ಅವರೆಲ್ಲರಿಗೆ ನನ್ನ ಕೃತಜ್ಞತೆಗಳು.

# ಒಪ್ಪೋಲೆ

| ಪುಟ | ತಪ್ಪು | ಸರಿ | ಸಾಲು |
|---|---|---|---|
| ಅರ್ಪಣೆ | ಕಡತೋಟ | ಕಡತೋಕ | ೧೦ |
| ೧೧ | ಹಸ್ತಾಭನಯ | ಹಸ್ತಾಭಿನಯ | ೧೦ |
| ೧೨ | ನುಡಿಸೆಸೆ | ನುಡಿಸೇಸೆ | ೧೫ |
| ೨೧ | ಸುಭದಾ | ಸುಭದ್ರಾ | ೧೬ |
| ೨೨ | ಸ್ತ್ರೀವಾಚವು | ಸ್ತ್ರೀವಾಚಕವು | ೧೨ |
| ೨೨ | ವಿದ್ದರಿ | ವಿದ್ದರೆ | ೧೬ |
| ೨೩ | ಸುಡಂಗಾಣ | ಸುಡುಗಾಡಿ | ೯ |
| ೨೪ | ದಿನ್ನಂಗ | ಧಿನ್ನಂಗ | ೩ |
| | ಧಿಕ್ಕಜ | ಧಿಕ್ಕಟ | |
| ೨೫ | ಅಭಿನಯಿಸೆದರೆ | ಅಭಿನಯಿಸಿದರೆ | ೧೦ |
| ೨೬ | ಭಿಮನೆ | ಭೀಮನೆ | ೫ |
| ೨೭ | ಕಾಣಿಪ | ಕಾಣುವ | ಕೊನೆಯ ಸಾಲು |
| ೨೯ | ಪಂಕ್ತ್ರಿಃರಿವ | ಪಂಕ್ತ್ರಿರಿವ | ೧೬ |
| ೪೦ | ಪಡ್ರ | ಪಡ್ರೆ | ಕೊ.ಸಾ |
| ೪೧ | ಕರೆಮನೆ | ಕೆರೆಮನೆ | ೧೧–೧೨ |
| ೪೩ | ರ್ರಿ | ರ್ರೈ | ೩ |
| ೪೩ | ವಿ.ಟ. | ವಿ.ಟೀ. | ೧೧ |

ಭಾವಚಿತ್ರ 12 ಸಹ ಚಂದ್ರ, ಅರ್ಧಚಂದ್ರ ಎಂಬುದನ್ನು ಸೂಚಿಸುತ್ತದೆ.

ಹಸ್ತವು ಕೆಳಗೆ ಎದೆಗೆ ಸಮಾನಾಂತರವಾಗಿ ಅರ್ಧ-ವೃತ್ತಾಕಾರವಲ್ಲಿ ತಿರುಗಿಸಿದರೆ ಸಭೆ ಎಂದಾಗುವುದು.

ದಶಾವತಾರ ಹಸ್ತ

ಬಾಲಗೋಪಾಲರು "ಹರೇರಮಣ ಗೋವಿಂದಾ............

ಮತ್ಸ್ಯಾವತಾರ ಗೋವಿಂದ"............

ಈ ಪದಗಳಿಗೂ ದಶಾವತಾರ ಹಸ್ತದ ಅಭಿನಯವನ್ನು ಮಾಡುತ್ತಿದ್ದರು.

೧೩ ಲೀಮುಖ ಶಿಲೀಮುಖ

ಭಾವಚಿತ್ರದ ಕಲಾವಿದರು 8–14 ವಿ.ಟೀ. ಶಿಗೇಹಳ್ಳಿ.